ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

# ಕಲಾ ವಾರ್ತೆ

ಅಕ್ಟೋಬರ್–ಡಿಸೆಂಬರ್ 2015, ಸಂಚಿಕೆ: 98

ಪ್ರಧಾನ ಸಂಪಾದಕರು

**ಡಾ. ಎಂ.ಎಸ್.ಮೂರ್ತಿ**

ಸಂಪಾದಕರು

**ರಾಜು ಮಳವಳ್ಳಿ**

ಪ್ರಕಟಣಾ ಸಮಿತಿ

**ಎಸ್.ಜಿ. ವಾಸುದೇವ್**

**ಕೆ.ವಿ. ಸುಬ್ರಹ್ಮಣ್ಯಂ**

**ಡಾ. ಪ್ರಮೀಳಾ ಲೋಚನ**

**ಸಿ. ಚಿಕ್ಕಣ್ಣ**

ಕನ್ನಡ ಭವನ, ಎರಡನೇ ಮಹಡಿ,
ಜೆ.ಸಿ. ರಸ್ತೆ, ಬೆಂಗಳೂರು–560002
ದೂರವಾಣಿ: 080–2248 0297
ಈ–ಮೇಲ್: kla.karnataka@gmail.com
www. lalitkalakarnataka.org
karnataka lalitha kala academy

**KALA VARTHE** - Quarterly News portal
Published by
K. Sudhindra, Registrar
Karnataka Lalitha Kala Academy
Kannada Bhavan, J.C. Road
Bangalore - 560 002
Ph : 080 - 2248 0297
E-mail : kla.karnataka@gmail.com
www.lalitkalakarnataka.org

Editor :
Raju Malavalli
M: 9739977450

Page : 44 +4
Copies : 2000

Printed at
**Regal Print Service**
Bangalore
M: 99643516 55

## ಪರಿವಿಡಿ


· ಅಧ್ಯಕ್ಷರ ಮಾತು ... 3
· ಸಂಪಾದಕರ ನುಡಿ ... 5
· ಹೊಸ ಹೆಜ್ಜೆ ... 7
· ಪ್ರಶಸ್ತಿ ಸಂಭ್ರಮ ... 14
· 'ಅಕಾಡೆಮಿ'ಯ ಮಾಧ್ಯಮ ಚಿತ್ರಗಳು ... 24
· ಕಲಾಪರಿಚಾರಿಕೆ ... 26
· ಸಾಗಿ ಬಂದ ಹಾದಿ ... 36

ಅಧ್ಯಕ್ಷರ ಮಾತು...



# ನಾವೆಲ್ಲರೂ ಒಂದೆಂಬ ಭಾವ ಬಿರಿಯಲಿ

ಇಲ್ಲಿಯವರೆಗೆ ಲಲಿತಕಲಾ ಅಕಾಡೆಮಿಯು ಸುಮಾರು ಹದಿನೈದು ತಿಂಗಳ ಅವಧಿಯಲ್ಲಿ 50ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಯಶಸ್ವಿಯಾಗಿ ನಡೆಸಿದೆ. ಸುಮಾರು 22 ಜಿಲ್ಲೆಗಳಲ್ಲಿ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಕಲಾಶಿಬಿರಗಳು ನಡೆದಿವೆ. ನಾಲ್ಕು ನೂರಕ್ಕೂ ಹೆಚ್ಚು ಕಲಾವಿದರಿಗೆ ಅವಕಾಶ ನೀಡಿದ್ದೇವೆ. ನೂರಾರು ಕಲಾಕೃತಿಗಳನ್ನು ಸಹಯೋಗ ನೀಡಿದ ಕಲಾಸಂಸ್ಥೆಗಳಿಗೆ ಕೊಡುಗೆಯಾಗಿ ನೀಡಿದ್ದೇವೆ. ಆ ಮೂಲಕ ಪ್ರತಿಷ್ಠಿತ ಕಲಾಸಂಸ್ಥೆಗಳಲ್ಲಿ ನಮ್ಮ ಕಲಾವಿದರ ಕೃತಿಗಳು ಎಲ್ಲರ ಗಮನ ಸೆಳೆಯುತ್ತವೆ.

ಜನಪ್ರಿಯವಾದ 'ಕಲಾಶಿಬಿರ' ಚಟುವಟಿಕೆಗೆ ಹೊಸ ರೂಪ ನೀಡಿ ಭಾಗವಹಿಸುವ ಎಲ್ಲಾ ಕಲಾವಿದರೊಂದಿಗೆ ಅಧ್ಯಕ್ಷರು ಮತ್ತು ಸಿಬ್ಬಂದಿ 'ಆಪ್ತ ಸಂವಾದ' ಮಾಡುವ ಮೂಲಕ ಕಲೆಯ ಬಗ್ಗೆ ಅರಿವು ಮೂಡಿಸುವ, ಪರಸ್ಪರ ಸಂವಾದಿಸುವ ಮತ್ತು ಸರ್ಕಾರದ ಲಲಿತಕಲಾ ಅಕಾಡೆಮಿಯ ಇತಿಮಿತಿ, ವ್ಯಾಪ್ತಿ ಇತ್ಯಾದಿಗಳ ಸೌಜನ್ಯಯುತ ಮಾತುಕತೆ ಎಲ್ಲರ ಮೆಚ್ಚುಗೆ ಗಳಿಸಿದೆ. ನಾಡಿನ ಎಲ್ಲಾ ಕಲಾವಿದರು ಕೇವಲ ಹಕ್ಕುಗಳ ಬಗ್ಗೆ

ಮಾತನಾಡುವ ಬದಲು ತಮ್ಮ ಜವಾಬ್ದಾರಿಯ ಕುರಿತು ಆಲೋಚಿಸಲು ತೊಡಗಬೇಕಿದೆ. ಕಲಾ ಸಮುದಾಯವು ತನ್ನ ವ್ಯಾಪ್ತಿ ವಿಸ್ತರಿಸಲು ತಾತ್ವಿಕ ನೆಲೆ ದೃಢವಾಗಲು ಬೇಕಾದ ಅರಿವು ಬೆಳೆಸಲು ಇಂತಹಾ ಪ್ರಯೋಗಗಳು ಮುಖ್ಯ ಎಂದು ಯುವ ಕಲಾವಿದರು ಸಂಘಟಿತ ರಾಗುತ್ತಿದ್ದಾರೆ.

ಜಾತಿ, ಧರ್ಮ, ಪ್ರದೇಶಗಳನ್ನು ಮೀರಿ **'ನಾವು ಕಲಾವಿದರು ಒಂದೇ'** ಎಂಬ ಸೌಹಾರ್ದತೆಯನ್ನು ಅಕಾಡೆಮಿಯ 50 ವರ್ಷಗಳ ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಸುವರ್ಣಾಕ್ಷರಗಳಲ್ಲಿ ಚರಿತ್ರೆಯಲ್ಲಿ ದಾಖಲಿಸುವ ಹೆಮ್ಮೆ ನಮ್ಮದಾಗಬೇಕು. ಅದಕ್ಕಾಗಿ ನಾವೆಲ್ಲರೂ ವೈಷಮ್ಯ, ಸ್ವಾರ್ಥಗಳನ್ನು ಮರೆತು ಪ್ರೀತಿಯಿಂದ 'ದೃಶ್ಯಕಲಾ ಸಮುದಾಯ' ವನ್ನು ಉಳಿಸಿ ಬೆಳೆಸೋಣ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಎಲ್ಲಾ ಕಾರ್ಯಕ್ರಮಗಳಲ್ಲಿ ಎಲ್ಲರೂ ಯಾವುದೇ ಭಿಡೆ ಇಲ್ಲದೆ ಭಾಗವಹಿಸಿ ಇತರರಿಗೆ ಮಾದರಿಯಾಗಿ ಎಂದು ಎಲ್ಲಾ ಕಲಾವಿದರಿಗೆ ಪ್ರೀತಿಯಿಂದ ಆಹ್ವಾನಿಸುತ್ತೇನೆ ಮತ್ತು ಮೂರನೇ ಕಲಾವಾರ್ತೆಯನ್ನು ನಿಮ್ಮ ಕೈಯಲ್ಲಿಡುತ್ತಿದ್ದೇನೆ.

**ಡಾ. ಎಂ.ಎಸ್.ಮೂರ್ತಿ**
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ

# ಸಂವಹನದ ಸಾರ್ಥಕತೆ...

**ಕ**ಲೆಯ ಅಭಿವ್ಯಕ್ತಿಗೆ ನಾನಾ ಮಾರ್ಗಗಳು. ಕಲೆ ಮತ್ತು ಕಲಾವಿದನ ಒಳಹೂರಣವನ್ನು ನೋಡುಗ–ಓದುಗನ ಮುಂದೆ ತೆರೆದಿಡುವುದೇ ಅಭಿವ್ಯಕ್ತಿ. ಈ ಅಭಿವ್ಯಕ್ತಿ ಸಶಕ್ತವಾಗಿದ್ದಾಗ ಮಾತ್ರವೇ ಸೃಜನಶೀಲ ಕಾರ್ಯ ಸಾರ್ಥಕತೆಯ ಸಾಫಲ್ಯ ಪಡೆಯಲು ಸಾಧ್ಯ. ಸಂವಹನ ಸಮರ್ಪಕ, ಸರಳ ಮತ್ತು ನೇರವಾಗಿರುವುದು ಬಹಳ ಮುಖ್ಯ. ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಎಲ್ಲವೂ ಅರ್ಥಪೂರ್ಣವಾಗಿ ಸಂವಹಿಸಬೇಕು. ಸಂವಹನದ ಮಾದರಿಗಳು ಅನೇಕವಿದ್ದರೂ ಸಂವಹನ ಅರ್ಥವಾಗುವಂತಿರಬೇಕು. ಭಾಷೆ, ಮತ, ಧರ್ಮ, ದೇಶ, ಲಿಂಗಭೇದವಿಲ್ಲದೆ ನೋಡುಗ–ಓದುಗನ ಮನಮುಟ್ಟುವ, ಮನ ಅರಳಿಸುವ ಸಂವಹನವೇ ಒಂದು ಕಲೆ. ಪ್ರತಿ ಸೃಜನಶೀಲ, ಸಂವೇದನಾಶೀಲ, ಪ್ರಯೋಗಶೀಲನೂ ತಾನು ಅಭಿವ್ಯಕ್ತಿಸುವ ಮಾಧ್ಯಮಗಳ್ಯಾವುದೇ ಇರಲಿ, ಸಂವಹನ ಗ್ರಹಿಸುವಂತಿರಬೇಕೆಂಬುದರ ಬಗ್ಗೆ ಜಾಗರೂಕರಾಗಿರಬೇಕು. ಅರ್ಥವಾಗದ, ಸಂವಹಿಸದ ಕಲೆ ನಿರರ್ಥಕ.

ಪ್ರದರ್ಶನ ಕಲೆಗಳಲ್ಲಿ ಭಾಷೆ ಮತ್ತು ಆಂಗಿಕ ಅಭಿನಯವೇ ಪ್ರದಾನವಾಗಿರುವ ಹಿನ್ನೆಲೆಯಲ್ಲಿ ಸಂವಹನ ತೀರ ಕಷ್ಟದಾಯಕವಲ್ಲ, ಶ್ರೋತೃಗಳಿಗೆ ಪಾತ್ರ, ನೃತ್ಯದಾಶಯ, ಆಲಾಪದ ಒಳಾರ್ಥಗಳನ್ನು ದಾಟಿಸುವುದು ಸುಲಭ ಮತ್ತು ಸರಳ. ಆದರೆ, ಈ ಮಾತನ್ನು ಲಲಿತಕಲೆಗಳಿಗೆ ಹೇಳಲಾಗದು. ಅದರಲ್ಲೂ ದೃಶ್ಯಕಲೆಯಲ್ಲಂತೂ ಸಂವಹನ ತುಸು ತ್ರಾಸದಾಯಕ. ಬಣ್ಣ ಮತ್ತು ಗೆರೆಗಳ ಸಾಂಗತ್ಯದಲ್ಲಿ ಒಡಮೂಡುವ ಚಿತ್ರದ ಮುಖೇನ ತನ್ನೊಳಗಿನ ಆಶಯವನ್ನು ನೋಡುಗನ ಮನಕ್ಕೆ ಮುಟ್ಟಿಸಲು ಕಲಾವಿದ ಅದ್ಭುತ ಸಂವಹನಕಾರ ನಾಗಿರಲೇಬೇಕು. ಬಣ್ಣ–ಗೆರೆಗಳ ಚಲನಶೀಲತೆ, ಲಾಲಿತ್ಯದ ಮೂಲಕವೇ ಕಲಾಪ್ರೇಮಿಯನ್ನು ಸೆರೆಹಿಡಿದು ಚಿಂತನೆಗೆ ಹಚ್ಚುವುದರಲ್ಲಿ ಕಲಾವಿದನ ಕಲಾವಂತಿಕೆ ಮತ್ತು ಜಾಣ್ಮೆ ಅಡಗಿದೆ.

ತನನ್ನು ಕಾಡಿದ, ಕನಲಿಸಿದ, ಕೆಣಕಿದ, ಕಡದಿದ ವಿದ್ಯಮಾನ, ವಿಚಾರಧಾರೆ, ಚಿಂತನೆಯನ್ನು ಕಲಾವಿದ ಅಷ್ಟೇ ಸಶಕ್ತವಾಗಿ, ಪರಿಣಾಮಕಾರಿಯಾಗಿ ಕುಂಚದ ಮೂಲಕ ಸಂವಹಿಸಿದಾಗ ಮಾತ್ರ ಕಲಾಕೃತಿ ನೋಡುಗನ ನೆನಪಲ್ಲಿ ಸದಾಕಾಲಕ್ಕೂ ಕೆಣಕುವ 'ಜೀವಂತಕೃತಿ'ಯಾಗಿರುತ್ತದೆ. ಈ ಜೀವಂತಕೃತಿ ಕಲಾಪ್ರೇಮಿಯು ಜೀವನವಿಡೀ ಮರೆಯಲಾರದ ಕೃತಿಯಾಗಿ ಸ್ಮೃತಿಪಟಲದಲ್ಲಿ ಉಳಿಯುವುದರ ಜೊತೆಗೆ ಕಲಾಸಂಸ್ಕಾರದ ಕಂಪನ್ನು ಸೂಸುತ್ತಾ ಉಲ್ಲಾಸಮಯಗೊಳಿಸುವ 'ಮಂದಾರಪುಷ್ಪ'ವಾಗಿ ಉಳಿದುಬಿಡುತ್ತದೆ. ಅಮೂರ್ತ ಭಾವಗಳು

'ಮೂರ್ತ'ವಾಗಿ ಅನಾವರಣಗೊಂಡು ಅಕ್ಷರಗಳಲ್ಲಿ ಹಿಡಿದಿಡಲಾರದ, ಮಾತುಗಳಲ್ಲಿ ಅಭಿವ್ಯಕ್ತಿಸಲಾಗದ 'ಅಮೂರ್ತ' ಆನಂದವಾಗಿ ಮನದಲ್ಲಿ ನೆಲೆಯೂರುವ ಪರಿ ನಿಜಕ್ಕೂ ಅನನ್ಯ, ಅನುಭವವೇದ್ಯ, ಅನಿವರ್ಚನೀಯವಾದುದು.

ಕಲೆಯ ಅನನ್ಯತೆಯನ್ನು ಎತ್ತಿಹಿಡಿಯುವ ಸಮರ್ಪಕ 'ಸಂವಹನ' ಕಲೆ ಎಲ್ಲರಿಗೂ ಸುಲಭವಾಗಿ ಒಲಿಯುವಂತಹುದಲ್ಲ. ಕಲಾಧ್ಯಾನಿ, ತಪಸ್ವಿ ಮತ್ತು ಆರಾಧಕನಿಗೆ ಬದ್ಧತೆ-ಪರಿಶ್ರಮದಿಂದ ಒಲಿಯುವ ಕಲೆಯದು. ಅಂತಹ ಕಲಾವಿದರು ಕಲಾಸಮುದಾಯದ ಗೌರವ-ಘನತೆ ಹೆಚ್ಚಿಸುವ ಆಣಿಮುತ್ತುಗಳಾಗಿರುತ್ತಾರೆ. ಶ್ರೀಗಂಧದ ಗುಡಿಯಾದ ಕನ್ನಡನಾಡು ಕಲಾಸಂಪನ್ನತೆಯ ಬೀಡು ಸಹ. ದೇಶದ ಇತರೆ ರಾಜ್ಯಗಳಿಗಿಂತಲೂ ಕಲಾವಿದರು, ಸಾಹಿತಿಗಳು ಮತ್ತು ಸೃಜನಶೀಲರು ಕರ್ನಾಟಕದಲ್ಲಿ ತುಸು ಹೆಚ್ಚಿರುವುದು ಹೆಮ್ಮೆಯ ಸಂಗತಿ. ಅಂತಹ ಕಲಾವಿದರಿಗೆ ಆಶ್ರಯ ಮತ್ತು ಪ್ರೋತ್ಸಾಹದ ಸಿಂಚನಗೈದು ಕಲಾಔನ್ನತ್ಯಕ್ಕೆ ಮಾರ್ಗ ತೆರೆಯುವುದು ಆಡಳಿತ ವ್ಯವಸ್ಥೆಯ ಆದ್ಯ ಕರ್ತವ್ಯ.

ಅಂತಹ ಹೊಣೆಗಾರಿಕೆಯನ್ನು ನಿರ್ವಹಿಸಲೆಂದೇ ಲಲಿತಕಲೆಗಳಿಗೆ ಸಂಬಂಧಿಸಿದಂತೆ ಸ್ಥಾಪಿತಗೊಂಡಿರುವ ಕರ್ನಾಟಕ ಲಲಿತಕಲಾ ಅಕಾಡೆಮಿ ತನ್ನ ಜವಾಬ್ದಾರಿಯನ್ನು ಕಾಲ, ಕಲೆ ಮತ್ತು ಕಲಾವಿದರ ಅಗತ್ಯಕ್ಕೆ ತಕ್ಕಂತೆ ನಿರ್ವಹಿಸಿಕೊಂಡು ಬರುತ್ತಿದೆ. ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಅಕಾಡೆಮಿ ವತಿಯಿಂದ ನಡೆದ ಕಾರ್ಯಕ್ರಮಗಳು, ಕಲಾವಿದರು ಪಡೆದ ಪ್ರಯೋಜನಗಳ ಪಟ್ಟಿ ಇಂತಹದೊಂದು ಕರ್ತವ್ಯ ನಿರ್ವಹಣೆಯನ್ನು ಧ್ವನಿಸುತ್ತದೆ.

ಕಲಾವಾರ್ತೆಯ ಈ ಮೂರನೇ ಸಂಚಿಕೆ ಎಂದಿನಂತೆ ಹಲವು ವಿಶೇಷಗಳನ್ನೊಳಗೊಂಡಿದ್ದರೂ ಬಹುಮುಖ್ಯವಾದುದು **'ಕನಸುಗಳು ನೂರಾರು ಸಾಕಾರಗೊಂಡವು ಹಲವಾರು'**. ಅಕಾಡೆಮಿಯ ನೂತನ ವೆಬ್‌ಸೈಟ್ ಲೋಕಾರ್ಪಣೆ, ವಿಚಾರಸಂಕಿರಣದಿಂದ ಆದಿಗೊಂಡು ನಿಮ್ಮ ಮುಂದೆ ತೆರೆದುಕೊಳ್ಳುತ್ತಿರುವ ಈ ಸಂಚಿಕೆ ಅಕಾಡೆಮಿ ಮೂಡಿಸುತ್ತಿರುವ ಹೆಜ್ಜೆಗುರತುಗಳನ್ನೂ ಸಹ ತೆರೆದಿಡುತ್ತದೆ. ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತರು, ವಾರ್ಷಿಕ ಬಹುಮಾನ ವಿಜೇತರ ಪಟ್ಟಿ ಮತ್ತವರ ಚಿತ್ರಗಳನ್ನು ಗಮನಿಸಿದಾಗ ಕಲೆಯ ಆಯಾಮಗಳು ಸಮ್ಮೋಹನಗೊಳಿಸದೇ ಇರದು. ನಾನಂತೂ ಅಂತಹದೊಂದು ಸಮ್ಮೋಹಕ್ಕೆ ಒಳಗಾಗಿರುವುದು ಸತ್ಯ. ಆ ಬೆರಗು, ಬೆಡಗು, ಆಸಕ್ತಿ, ಆನಂದ ಓದುಗರಾದ ನಿಮಗೂ ದಕ್ಕಿದರೆ ಸಂಚಿಕೆ ನಿರ್ವಹಣೆಯ ಕಾರ್ಯ ಸಾರ್ಥಕವಾದಂತೆ. ಪತ್ರ ಸಂವಾದದ ಮೂಲಕ ನಿಮ್ಮ ಆ ಅನುಭವಗಳನ್ನು ಅಕಾಡೆಮಿಗೆ ಮುಟ್ಟಿಸಿದರೆ 'ಕಲಾವಾರ್ತೆ' ಅವುಗಳನ್ನು ಪ್ರಕಟಿಸಲಿದ್ದು ಅಂತಹದೊಂದು ಪತ್ರಸಂವಹನವು ಪರಂಪರೆಯ ಸ್ವರೂಪ ಪಡೆದು ನಡೆಯಲೆಂಬ ನಿರೀಕ್ಷೆ ನಮ್ಮೆಲ್ಲರದ್ದು.

**ರಾಜು ಮಳವಳ್ಳಿ**
ಸಂಪಾದಕರು

# ವೆಬ್‌ಸೈಟ್ ಲೋಕಾರ್ಪಣೆ

**ಮಾ**ಹಿತಿಯುಗದ ಈ ಕಾಲದಲ್ಲಿ ವೆಬ್‌ಸೈಟ್‌ಗಳು ಮಾಹಿತಿಕೋಶ ವಾಗಿದ್ದು ಸರ್ಕಾರದ ಯೋಜನೆಗಳು ಹೆಚ್ಚು ಜನರು ಅದರಲ್ಲೂ ಯುವಜನರನ್ನು ಮುಟ್ಟಲು ವೆಬ್‌ಸೈಟ್ ಅತ್ಯುತ್ತಮವಾದ ವಾಹಕವಾಗಿದೆ. ಈಗಾಗಲೇ ಪ್ರಾರಂಭವಾಗಿ ನಿಷ್ಕ್ರಿಯವಾಗಿ ನೆನೆಗುದಿಗೆ ಬಿದ್ದಿದ್ದ ಲಲಿತಕಲಾ ಅಕಾಡೆಮಿಯ **'ವೈಬ್‌ಸೈಟ್'** ಅನ್ನು ಪುನಶ್ಚೇತನಗೊಳಿಸಿ ಅಕಾಡೆಮಿಯು 'ಸುವರ್ಣ ಸಂಭ್ರಮ' ವನ್ನು ದಾಖಲಿಸಿದೆ. ಆ ದೆಸೆಯಲ್ಲಿ ಅಕಾಡೆಮಿಯ ಸುವ್ಯವಸ್ಥಿತ ವೆಬ್‌ಸೈಟ್ ರೂಪಿಸಬೇಕೆಂಬ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಕಲ್ಪನೆ ಇದೀಗ ಸಾಕಾರಗೊಂಡಿದೆ.





**ಅಕಾಡೆಮಿಯ ನವೀಕೃತ ವೆಬ್‌ಸೈಟ್‌ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶೀ ಕೆ.ಎ.ದಯಾನಂದ ಅವರಿಂದ ಚಾಲನೆ.**

www.lalitkalakarnataka.org ವಿಳಾಸ ಹೊಂದಿರುವ ಈ ವಿನೂತನ ವೆಬ್‌ಸೈಟ್ ಅಕಾಡೆಮಿಯ ಕಾರ್ಯಚಟುವಟಿಕೆಗಳ ಸಮಗ್ರ ಮಾಹಿತಿಯನ್ನೊಳಗೊಂಡಿದೆ. ಫೋಟೋ ಗ್ಯಾಲರಿ, ಮಾಧ್ಯಮಗಳಲ್ಲಿ ಅಕಾಡೆಮಿ, ಪತ್ರಿಕಾ ಪ್ರಕಟಣೆಗಳು, ಅಕಾಡೆಮಿ ಪ್ರಕಟಿಸಿರುವ ಪುಸ್ತಕಗಳು, ಅಕಾಡೆಮಿಯ ಹಿನ್ನೆಲೆ, ಚಟುವಟಿಕೆಗಳು, ಘಟನೆಗಳು, ಸಂಪರ್ಕ ವಿಳಾಸ, ದೂರವಾಣಿ ಸಂಖ್ಯೆ, ಈ-ಮೇಲ್ ವಿಳಾಸ, ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಪಟ್ಟಿ, ವಾರ್ಷಿಕ ಬಹುಮಾನ ವಿಜೇತರ ಪಟ್ಟಿ. ಹೀಗೆ ಎಲ್ಲಾ ಬಗೆಯ ಮಾಹಿತಿಗಳನ್ನು ಈ ವೆಬ್‌ಸೈಟ್ ಒಳಗೊಂಡಿದೆ. ಅಕಾಡೆಮಿಯ ಬಗೆಗಿನ ಸಂಪೂರ್ಣ ಮಾಹಿತಿ ಮತ್ತು ಅಕಾಡೆಮಿಯ ಇಂದಿನ-ಮುಂದಿನ ನಡೆಗಳ ಬಗ್ಗೆ ತಿಳುವಳಿಕೆಯನ್ನು ಈ ವೆಬ್‌ಸೈಟ್ ಮೂಲಕ ಮಾಹಿತಿಗಳು ಕಲಾವಿದರಿಗೆ ತಲುಪುತ್ತದೆ.

ಬಹುಯೋಜಿತವಾಗಿ ರೂಪಿಸಲಾಗಿರುವ ಈ ವೆಬ್‌ಸೈಟ್‌ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ.ದಯಾನಂದ ಅವರು ನವೆಂಬರ್ ೨ರಂದು ಅಕಾಡೆಮಿಯ ವರ್ಣ ಕಲಾಗ್ಯಾಲರಿಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಚಾಲನೆ ನೀಡುವ ಮೂಲಕ ಕಲಾವಲಯಕ್ಕೆ ಸಮರ್ಪಿಸಿದರು. ಈ ಸಡಗರದ ಕ್ಷಣಕ್ಕೆ ಹಿರಿಯ ಕಲಾವಿದ ಎಸ್.ಜಿ.ವಾಸುದೇವ್, ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಸಾಕ್ಷಿಯಾದರು.

**ಕಲಾವಿದರಿಗೆ ಗುರುತಿನ ಚೀಟಿ**

ಇದೇ ವೇಳೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಹತ್ವಾಕಾಂಕ್ಷಿ ಯೋಜನೆಯಾದ ರಾಜ್ಯದ ಕಲಾವಿದರಿಗೆ ಗುರುತಿನ ಚೀಟಿ ವಿತರಿಸುವ ಕಾರ್ಯಕ್ಕೂ ಚಾಲನೆ ದೊರೆಯಿತು. ಆ ಮೂಲಕ ದೇಶದಲ್ಲಿಯೇ ಮೊದಲ ಬಾರಿಗೆ ಅರ್ಹ ಕಲಾವಿದರಿಗೆ ಗುರುತಿನ ಚೀಟಿ ನೀಡಿದ ಹೆಗ್ಗಳಿಕೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಭಾಜನವಾಯಿತು.



**ಹಿರಿಯ ಕಲಾವಿದರಾದ ಶ್ರೀ ಎಸ್.ಜಿ.ವಾಸುದೇವ್ ಅವರಿಗೆ ಗುರುತಿನ ಚೀಟಿ ವಿತರಣೆ.**



**ಗುರುತಿನ ಚೀಟಿ ವಿತರಣೆ ಕಾರ್ಯಕ್ರಮದಲ್ಲಿ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ಕಲಾವಿದರಾದ ಶ್ರೀ ಎಸ್.ಜಿ.ವಾಸುದೇವ್, ಶ್ರೀ ಚಂದ್ರನಾಥ್ ಆಚಾರ್ಯ, ಡಾ. ವಿ.ಟಿ.ಕಾಳೆ, ಶ್ರೀ ಯು., ಭಾಸ್ಕರ್‌ರಾವ್, ಶ್ರೀ ಎಂ.ಬಿ.ಪಾಟೀಲ, ಶ್ರೀ ಕೆ.ವಿ.ಸುಬ್ರಹ್ಮಣ್ಯಂ, ಅಕಾಡೆಮಿ ಸದಸ್ಯರಾದ ಹರಸೂರು ಅವರು ಪಾಲ್ಗೊಂಡಿದ್ದರು.**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ.ದಯಾನಂದ್ ಅವರು ಹಿರಿಯ ಚಿತ್ರಕಲಾವಿದರಾದ ಎಸ್.ಜಿ. ವಾಸುದೇವ್, ಡಾ. ವಿ.ಟಿ. ಕಾಳೆ, ಎಂ.ಬಿ.ಪಾಟೀಲ ಮತ್ತಿತರರಿಗೆ ಗುರುತಿನ ಚೀಟಿ ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ದಯಾನಂದ್ ಅವರು, ಇಲಾಖೆಯು ಕಲಾವಿದರಿಗೆ ಗುರುತಿನ ಚೀಟಿ ವಿತರಿಸಬೇಕೆಂಬ ಯೋಜನೆ ಬಹುವರ್ಷಗಳಿಂದಲೂ ನೆನೆಗುದಿಗೆ ಬಿದ್ದಿದೆ. ಆದರೆ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಎಂ.ಎಸ್.ಮೂರ್ತಿ ಅವರು ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿರುವುದು ಸಂತಸದ ವಿಚಾರ ಎಂದರು.

ಅಕಾಡೆಮಿಯ ಅಧ್ಯಕ್ಷರಾದ ಎಂ.ಎಸ್.ಮೂರ್ತಿ ಅವರು ಮಾತನಾಡಿ, ದಶಕಗಳ ಕಾಲ ಲಲಿತಕಲೆಗಳಲ್ಲಿ ಸೇವೆ ಸಲ್ಲಿಸಿದ ಕಲಾವಿದರಿಗೆ ಅಧಿಕೃತ ಗುರುತಿನ ಚೀಟಿ ನೀಡಲು ಅಕಾಡೆಮಿ ಮುಂದಾಗಿದ್ದು ಗುರುತಿನ ಚೀಟಿಯಲ್ಲಿ ಮಾಹಿತಿ ತಪ್ಪಾಗಬಾರದೆಂಬ ಉದ್ದೇಶದಿಂದ ಅರ್ಜಿ ಅಹ್ವಾನಿಸಲಾಗಿದೆ. ಈ ಚೀಟಿ ಹೊಂದಿದವರಿಗೆ ವಾರ್ಷಿಕ ರಿಯಾಯಿತಿ ದರದ ಬಸ್ ಪಾಸ್, ರೈಲ್ವೆ ಪಾಸ್, ಜೀವವಿಮೆ ಮತ್ತು ಉಚಿತ ಹೃದಯ ಶಸ್ತ್ರಚಿಕಿತ್ಸೆಗೆ ನೆರವಾಗುವುದು ಸೇರಿದಂತೆ ಹಲವು ಸೌಲಭ್ಯಗಳು ದೊರೆಯುವಂತಾಗಲು ಅಕಾಡೆಮಿ ಕಾರ್ಯೋನ್ಮುಖವಾಗಲಿದೆ ಎಂಬ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ನಾಡಿನ ಹಲವು ಹೆಸರಾಂತ ಚಿತ್ರಕಲಾವಿದರು ಮತ್ತು ಅಕಾಡೆಮಿಯ ಸದಸ್ಯ ಕಲಾವಿದರುಗಳಿಗೆ ಗುರುತಿನ ಚೀಟಿಯನ್ನು ವಿತರಿಸಲಾಯಿತು.

■

# ವಿಚಾರಸಂಕಿರಣ

**ಕ**ರ್ನಾಟಕ ಲಲಿತಕಲಾ ಅಕಾಡೆಮಿಯು ರಾಜ್ಯದ ವಿವಿಧೆಡೆ ಕಲಾಶಿಬಿರಗಳನ್ನು ಏರ್ಪಡಿಸುವುದರ ಜೊತೆಗೇ 'ದೃಶ್ಯಕಲೆ' ಯಲ್ಲಿ ಅನೇಕ ಸಾಧ್ಯತೆಗಳು ಮತ್ತು ಮಹತ್ವಗಳ ಕುರಿತು ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲು ನಿರ್ಧರಿಸಿದೆ.

ಪ್ರಥಮವಾಗಿ ರೇಖೆಗಳ ಮಹತ್ವ, ಕಲಾಶಿಕ್ಷಣ, ಕಲಾಸಾಹಿತ್ಯ. ಹೀಗೆ ದೃಶ್ಯಕಲೆಗೆ ಸಂಬಂಧಿಸಿದ ಎಲ್ಲಾ ಸೃಜನಾತ್ಮಕ ಪ್ರಕಾರಗಳ ಕುರಿತು ವಿಚಾರಸಂಕಿರಣ, ಸಂವಾದಗಳನ್ನು ನಡೆಸಲು ನಿಶ್ಚಯಿಸಿರುವುದೇ ಅಲ್ಲದೆ, ಆ ವಿಚಾರಸಂಕಿರಣಗಳಲ್ಲಿ ಹೊಸ ತಲೆಮಾರಿನ ಕಲಾವಿದರಿಗೆ ಉಪನ್ಯಾಸದ ಅವಕಾಶ ಕಲ್ಪಿಸಿ ಅವರನ್ನು ಕಲಾಸಾಹಿತ್ಯ ಕ್ಷೇತ್ರಕ್ಕೆ ಪರಿಚಯಿಸುವ ಯೋಜನೆಯನ್ನೂ ಹಮ್ಮಿಕೊಂಡಿದೆ. ವಿಚಾರಸಂಕಿರಣಗಳಲ್ಲಿ ವಿಚಾರ ಮಂಡಿಸುವ ಉಪನ್ಯಾಸಕಾರರ ಮಂಡಿತ ಪ್ರಬಂಧ ಮತ್ತು ಆ ವಸ್ತುವಿಗೆ ಕುರಿತು ಕಮ್ಮಟದ ಸಂವಾದದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಕಲಾವಿದರ ಬರವಣಿಗೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲು ತೀರ್ಮಾನಿಸಿದೆ. ವಿಚಾರಮಂಥನಗಳು ಮಾತಿಗೆ ಸೀಮಿತವಾಗದೆ ಕೃತಿಯ ರೂಪ ಪಡೆಯುವ ಮೂಲಕ ಅದನ್ನು ದಾಖಲಿಸುವ ಚಿಂತನೆ ಅಕಾಡೆಮಿಯದ್ದಾಗಿದೆ.



**ಕೊಡಗು ಜಿಲ್ಲಾಧಿಕಾರಿ ಶೀ ಮೀರ್ ಅನೀಸ್ ಆಹ್ಮದ್ ಅವರಿಂದ ವಿಚಾರಸಂಕಿರಣದ ಉದ್ಘಾಟನೆ. ಮೈಸೂರು ರಂಗಾಯಣದ ಆಡಳಿತಾಧಿಕಾರಿ ಶ್ರೀ ಎಸ್.ವಿ ಭಾವಿಕಟ್ಟಿ, ಆಕಾಡೆಮಿ ಅಧ್ಯಕ್ಷರಾದ ಡಾ.ಎಂ.ಎನ್. ಮೂರ್ತಿ, ಕಲಾವಿರ್ಮಶಕ ಕೆ.ವಿ ಸುಬ್ರಹ್ಮಣ್ಯಂ ಮತ್ತಿತರರ ಉಪಸ್ಥಿತಿ**



ಅಕಾಡೆಮಿ ಅಧ್ಯಕ್ಷರಿಂದ ವಿಚಾರಸಂಕಿರಣದ ಸ್ವರೂಪ–ಉದ್ದೇಶಗಳ ಕುರಿತು ವಿವರಣೆ

ಆ ದೆಸೆಯಲ್ಲಿನ ಮೊದಲ ಹೊಸ ಹೆಜ್ಜೆಯಾಗಿ ನವೆಂಬರ್ 30 ಮತ್ತು ಡಿಸೆಂಬರ್ 1ರಂದು ಮಡಿಕೇರಿಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು 'ದೃಶ್ಯಕಲೆಯಲ್ಲಿ ರೇಖೆಗಳ ಮಹತ್ವ' ಕುರಿತು ಎರಡು ದಿನಗಳ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು.


ಮಡಿಕೇರಿಯ ಕಾಫೀ ಮೌಂಟೇನ್ ರೆಸಾರ್ಟ್(ಕತ್ತಲೆಕಾಡು)ನಲ್ಲಿ ನಡೆದ ವಿಚಾರಸಂಕಿರಣವನ್ನು ಕೊಡಗು ಜಿಲ್ಲಾಧಿಕಾರಿ ಶ್ರೀ ಮೀರ್ ಅನೀಸ್ ಅಹ್ಮದ್ ಅವರು ಉದ್ಘಾಟಿಸಿದರು. ಹೆಸರಾಂತ ಕಲಾವಿಮರ್ಶಕ ಶ್ರೀ ಕೆ.ವಿ.ಸುಬ್ರಹ್ಮಣ್ಯಂ ಹಾಗೂ ಮೈಸೂರು ರಂಗಾಯಣದ ಆಡಳಿತಾಧಿಕಾರಿ ಶ್ರೀ ಎಸ್.ವಿ. ಭಾವಿಕಟ್ಟಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಉದ್ಘಾಟನಾ ಸಮಾರಂಭದ ಬಳಿಕ ನಡೆದ ಮೊದಲ ಗೋಷ್ಠಿಯಲ್ಲಿ ಬೆಂಗಳೂರಿನ ಡಾ. ರಾಘವೇಂದ್ರ ಹೆಚ್. ಕುಲಕರ್ಣಿ ಅವರು **'ಕಲಾ ಇತಿಹಾಸ ಮತ್ತು ರೇಖೆಗಳು'** ಕುರಿತು ಉಪನ್ಯಾಸ ನೀಡಿದರು. ಆನಂತರ ಉಡುಪಿಯ ಕಲಾವಿದ ಶ್ರೀ ಪುರುಷೋತ್ತಮ ಅಡ್ವೆ ಅವರು **'ಸಾಂಪ್ರದಾಯಿಕ ಕಲೆಯಲ್ಲಿ ರೇಖಾಚಿತ್ರಗಳ ಮಹತ್ವ'** ವನ್ನು ತಿಳಿಸಿಕೊಟ್ಟರು. ಹೆಸರಾಂತ ಕಲಾ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂ ಅವರು **'ದೃಶ್ಯಕಲೆಯಲ್ಲಿ ರೇಖಾಚಿತ್ರದ ನೆಲೆ'** ಯನ್ನು ಸವಿಸ್ತಾರವಾಗಿ ವಿವರಿಸಿದರು.

ಎರಡನೇ ದಿನ ನಡೆದ ನಾಲ್ಕನೇ ಗೋಷ್ಠಿಯಲ್ಲಿ ಬೆಂಗಳೂರಿನ ಶ್ರೀ ಎಂ.ಕೆ. ಕಿರಣ್‌ಕುಮಾರ್ ಅವರು **'ಆಧುನಿಕ ಕಲಾ ಸಂದರ್ಭದಲ್ಲಿ ರೇಖಾಚಿತ್ರಗಳ ಪ್ರಯೋಗಗಳು'** ಕುರಿತು ಪ್ರಾತ್ಯಕ್ಷಿಕೆಯ ಸಮೇತ ಬೆಳಕು ಚೆಲ್ಲಿದರು. ಡಾ. ರಾಜಶೇಖರ್ ಬಿಲ್ವಪತ್ರಿ ಅವರು **'ರೇಖಾಚಿತ್ರಗಳ ಸೊಗಸು ಮತ್ತು ಮೌಲ್ಯಗಳು'** ಕುರಿತು ವಿಚಾರ ಮಂಡಿಸುವ ಮೂಲಕ ಚಿಂತನಮಂಥನಕ್ಕೆ ತೆರೆ ಎಳೆದರು.

ರಾಜ್ಯದ ವಿವಿಧ ಭಾಗಗಳಿಂದ ವಿಚಾರಸಂಕಿರಣದಲ್ಲಿ ಭಾಗವಹಿಸಲು ಬಂದಿದ್ದ ಕಲಬುರ್ಗಿಯ ಶ್ರೀ ಮೋಹನ್ ಸೀತನೂರು, ಶ್ರೀ ಜಗದೀಶ್ ಕಾಂಬ್ಳೆ,







**ವಿಚಾರಸಂಕಿರಣದಲ್ಲಿ ಶ್ರೀ ಪುರುಷೋತ್ತಮ ಅಡ್ವೆ, ಶ್ರೀ ಕೆ.ವಿ ಸುಬ್ರಹ್ಮಣ್ಯಂ ಮತ್ತು ಶ್ರೀ ಕಿರಣ್ ಕುಮಾರ್ ಮಾಡಾಳು ಅವರಿಂದ ವಿಚಾರಮಂಡನೆ.**

ತಮಕೂರಿನ ಶ್ರೀ ಕಿಶೋರ್ ಕುಮಾರ್, ಮೈಸೂರಿನ ವಿಠ್ಠಲ್ ರೆಡ್ಡಿ ಎಫ್ ಚುಳಕಿ, ಬೆಂಗಳೂರಿನ ಶ್ರೀ ಬಾಗೂರು ಮಾರ್ಕಾಂಡೇಯ, ಧಾರವಾಡದ ಶ್ರೀ ಎಫ್.ವಿ. ಚಿಕ್ಕಮಠ್, ಮೂಡಬಿದರೆಯ ಶ್ರೀ ಭಾಸ್ಕರ್ ನೆಲ್ಯಾಡಿ, ತುಮಕೂರಿನ ಶ್ರೀ ಪಿ.ಬಿ.ಹರಸೂರು, ಬೆಂಗಳೂರಿನ ಶ್ರೀ ಕೆ. ಐಶ್ವರ್ಯನ್, ಶ್ರೀ ಸುನೀಲ್ ಮಿಶ್ರಾ, ಶ್ರೀ ತಿರುನಾವುಕ್ಕರಸು, ಶ್ರೀ ಮಂಜೇಗೌಡ, ಮಡಿಕೇರಿಯ ಶ್ರೀ ಬಿ.ಆರ್.ಸತೀಶ್, ಶ್ರೀ ಮಂಜುನಾಥ್, ಕೊಪ್ಪಳದ ಶ್ರೀ ಭೀಮರಾಯ ದೇವಿಕೇರಿ ಮತ್ತು ಮಂಗಳೂರಿನ ಶ್ರೀ ಅನಂತಪದ್ಮನಾಭ ಅವರು ವಿಚಾರಸಂಕಿರಣದ ಸಂವಾದದಲ್ಲಿ ಭಾಗವಹಿಸಿ 'ದೃಶ್ಯಕಲೆಯಲ್ಲಿ ಸರಳ ರೇಖೆಗಳ ಮಹತ್ವ'ದ ವಿವಿಧ ಆಯಾಮಗಳ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆಸಿ ಹೊಸ ಹೊಳಹುಗಳ ಅನಾವರಣಕ್ಕೆ ಕಾರಣರಾದರು.

ಡಿಸೆಂಬರ್ 1ರಂದು ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ಶ್ರೀ ಕೆ.ವಿ.ಸುಬ್ರಹ್ಮಣ್ಯಂ ಸೇರಿದಂತೆ ಹಲವರು ಪಾಲ್ಗೊಂಡು ವಿಚಾರಸಂಕಿರಣದ ಸಾರ್ಥಕತೆಯ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು.

### ‘ಸುವರ್ಣ ಕಲಾವಿದರು’ ಅಕರ ಗ್ರಂಥ

ರಾಜ್ಯದ ದೃಶ್ಯಕಲಾವಿದರ ಕುರಿತು ಪುಸ್ತಕ ಪ್ರಕಟಿಸಲು ಕರ್ನಾಟಕ ಲಲಿತಕಲಾ ಅಕಾಡೆಮಿ ಚಿಂತನೆ ನಡೆಸಿದೆ.

ಅಕಾಡೆಮಿಯ ಸುವರ್ಣ ಮಹೋತ್ಸವದ ಸಡಗರದಲ್ಲಿರುವ ಈ ಸಂದರ್ಭದಲ್ಲಿ ರಾಜ್ಯದ ದೃಶ್ಯಕಲಾ ಕ್ಷೇತ್ರದ ಗೌರವ, ಘನತೆಗಳನ್ನು ಹೆಚ್ಚಿಸಿದ, ರಾಷ್ಟ್ರ, ಅಂತಾರಾಷ್ಟ್ರ ಮತ್ತು ರಾಜ್ಯದ ಪ್ರತಿಷ್ಠಿತ ಕಲಾವಿದರ ಕಲಾಸಮುದಾಯಕ್ಕಾಗಿ ದುಡಿದ ಅನೇಕ ಕಲಾವಿದರ ಮಾಹಿತಿ ಸಂಗ್ರಹಕ್ಕೆ ಚಾಲನೆ ನೀಡಲಾಗಿದ್ದು ಕಲಾವಿದರ ಕಲಾಕೃತಿ ಹಾಗೂ ವ್ಯಯಕ್ತಿಕ ವಿವರವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆಯನ್ನು ಅಕಾಡೆಮಿ ಹೊಂದಿದ್ದು ಮುಂಬರುವ ದಿನಗಳಲ್ಲಿ ಈ ಯೋಜನೆ ಕಾರ್ಯರೂಪಕ್ಕೆ ಬರಲಿದೆ.

### ಕಲಾವಿದರ ವಿನಿಮಯ

‘ಸುವರ್ಣ ಸಂಭ್ರಮ’ದ ಈ ಸಂದರ್ಭದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಹೊರರಾಜ್ಯಗಳೊಂದಿಗೆ ಕಲಾವಿದರ ಮತ್ತು ಕಲಾ ವಿದ್ವಾಂಸರ ವಿನಿಮಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ಧರಿಸಿದೆ.

ಚಾರಿತ್ರಿಕವಾದ ಈ ನಿರ್ಧಾರವು ರಾಜ್ಯದ ಕಲಾವಿದರು ಮತ್ತು ಹೊರರಾಜ್ಯದ ಕಲಾವಿದರು ಪರಸ್ಪರ ವೈಚಾರಿಕ, ಸೃಜನಶೀಲ ಚಿಂತನೆಯ ವಿನಿಮಯಕ್ಕೆ ಕಾರಣವಾಗುವುದು. ದೇಶದ ಹತ್ತು ರಾಜ್ಯಗಳಲ್ಲಿ ಲಲಿತಕಲಾ ಅಕಾಡೆಮಿಗಳಿದ್ದು ಅವುಗಳ ಜೊತೆಗೆ ಸಂಪರ್ಕ ಸಾಧಿಸಿ ಆ ಅಕಾಡೆಮಿಗಳ ಅಧ್ಯಕ್ಷರನ್ನು ರಾಜ್ಯಕ್ಕೆ ಆಹ್ವಾನಿಸಿ ವಿಶೇಷ ಕಲಾಶಿಬಿರ ಆಯೋಜಿಸಲು ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಚಿಂತನೆ ನಡೆಸಿದ್ದಾರೆ.

ಹೊರರಾಜ್ಯಗಳ ಅಕಾಡೆಮಿಗಳ ಅಧ್ಯಕ್ಷರು ರಾಜ್ಯದಲ್ಲಿ ಜರುಗುವ ಸಂದರ್ಭದಲ್ಲಿ ವಿಶೇಷ ಕಲಾಶಿಬಿರದಲ್ಲಿ ಭಾಗವಹಿಸಿದ್ದ ದೇಶದ ವಿವಿಧ ರಾಜ್ಯಗಳೊಂದಿಗೆ ಕಲಾವಿದರು ಮತ್ತು ಕಲಾ ವಿದ್ವಾಂಸರ ವಿನಿಮಯಕ್ಕೆ ಸಂಬಂಧಿಸಿದಂತೆ ಒಡಂಬಡಿಕೆ (ಎಂಒಯು) ಮಾಡಿಕೊಳ್ಳಲು ಚಿಂತನೆ ನಡೆಸಲಾಗಿದೆ. ಪ್ರತಿ ವರ್ಷ ಬೇರೆ ರಾಜ್ಯದ ಐವರು ಕಲಾವಿದರು ಹಾಗೂ ಕಲಾ ವಿದ್ವಾಂಸರನ್ನು ರಾಜ್ಯಕ್ಕೆ ಆಹ್ವಾನಿಸಿ ಇಲ್ಲಿನ ಕಲಾಶಿಬಿರಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದರ ಜೊತೆಗೆ ಕಲಾವಿದ್ವಾಂಸರಿಂದ ಶಿಬಿರಾರ್ಥಿಗಳಿಗೆ ವಿಶೇಷ ಉಪನ್ಯಾಸ ಹಮ್ಮಿಕೊಳ್ಳುವುದು. ಅಂತೆಯೇ ರಾಜ್ಯದ ಐವರು ಕಲಾವಿದರು ಮತ್ತು ಕಲಾವಿದ್ವಾಂಸರು ಹೊರ ರಾಜ್ಯದ ಕಲಾಶಿಬಿರಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಯೋಜನೆ ಜಾರಿಗೊಳಿಸುವ ಸಂಬಂಧ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ವಿಶೇಷ ಕಲಾ ಶಿಬಿರವನ್ನು ಆಯೋಜಿಸಲು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ನಿಶ್ಚಯಿಸಿದ್ದಾರೆ. ■

# ಸಾಧನೆಗೆ ಸಾರ್ಥಕತೆ

ಕನ್ನಡ ಚಿತ್ರಕಲಾ ವಲಯ ಪ್ರತಿಭಾವಂತರ ಸಂಪನ್ನ ಕ್ಷೇತ್ರ. ದೃಶ್ಯಕಲೆಯಲ್ಲಿ ಪ್ರಯೋಗ ಮತ್ತು ಪ್ರತಿಭಾವಂತಿಕೆಯಿಂದ ಗಮನಸೆಳೆದ, ಕಲಾ ಸಮುದಾಯಕ್ಕೆ ಅನರ್ಘ್ಯ ಸೇವೆ ಸಲ್ಲಿಸಿದ ಪ್ರತಿಭೆಗಳು ನೂರಾರು. ಅಂತಹ ಪ್ರತಿಭಾಸಂಪನ್ನರನ್ನು ಗುರುತಿಸಿ ಪ್ರಶಸ್ತಿ ನೀಡುವ ಸತ್ಸಂಪ್ರದಾಯವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಪರಂಪರೆಯ ಒಂದು ಭಾಗವಾಗಿ ಅನೂಚಾನವಾಗಿ ಆಚರಿಸಿಕೊಂಡು ಬರುತ್ತಲಿದೆ. ಇದೀಗ 2015ನೇ ಸಾಲಿನ ಸರದಿ.

ಚಿತ್ರಕಲಾ ಪ್ರಪಂಚಕ್ಕೆ ಜೀವಮಾನದ ಅಮೂಲ್ಯವಾದ ಸೇವೆಯನ್ನು ಪರಿಗಣಿಸಿ ಈ ಬಾರಿಯೂ ಎಂದಿನಂತೆ ಮೂವರು ಹಿರಿಯ ಕಲಾವಿದರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು 2015ನೆಯ ಸಾಲಿನ ವರ್ಷದ ಗೌರವ ಪ್ರಶಸ್ತಿಯನ್ನು ನೀಡುತ್ತಲಿದೆ.


ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 14ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

## 2015ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರು

### ಶ್ರೀ ಎಲ್.ಎಸ್.ಎನ್. ಆಚಾರ್, ಮೈಸೂರು

1938ರಲ್ಲಿ ಮೈಸೂರಿನಲ್ಲಿ ಜನಿಸಿದ ಶ್ರೀ ಎಲ್.ಎಸ್.ಎನ್.ಆಚಾರ್ ಅವರು ತಂದೆ ತಾಯಿಯರ ಪ್ರೋತ್ಸಾಹ ಹಾಗೂ ಸ್ವ ಪ್ರತಿಭೆಯಿಂದ ಬಿಡುವಿನ ವೇಳೆಯಲ್ಲಿ ಚಿತ್ರರಚನೆಯನ್ನು ಪ್ರಾರಂಭಿಸಿದರು. ಭಾರತೀಯ, ನವ್ಯಶೈಲಿಯಲ್ಲಿ ಚಿತ್ರರಚನೆಯನ್ನು ರಚಿಸಿ ವೈವಿಧ್ಯತೆಯನ್ನು ಮೈಗೂಡಿಸಿ ಕೊಂಡ ಇವರು ರೇಖಾಚಿತ್ರ, ಕಲ್ಪನಾ ಚಿತ್ರ, ಪ್ರಕೃತಿ ಚಿತ್ರಗಳ ರಚನೆಯಲ್ಲಿ ಸಿದ್ಧಹಸ್ತರು.

ಮೈಸೂರು, ಬೆಂಗಳೂರು, ತರೀಕೆರೆ, ಕಡೂರು, ಧಾರವಾಡ, ತುಮಕೂರು, ಬಳ್ಳಾರಿ ಮುಂತಾದೆಡೆಗಳಲ್ಲಿ ನಡೆದ ಚಿತ್ರಕಲಾ ಪ್ರದರ್ಶನಗಳಲ್ಲಿ ಏಕವ್ಯಕ್ತಿ ಪ್ರದರ್ಶನಗಳನ್ನು ನೀಡಿರುವುದಲ್ಲದೆ, ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಕಲಾಪ್ರದರ್ಶನ, ಮೈಸೂರಿನ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಖ್ಯಾತ ಕಲಾವಿದರ ಚಿತ್ರಕಲಾ ಪ್ರದರ್ಶನ, ಮೈಸೂರಿನ ಭರಣಿ





ಆರ್ಟ್‌ಗ್ಯಾಲರಿ, ಸಬ್‌ರಂಗ್ ಆರ್ಟ್ ಗ್ಯಾಲರಿಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನಗಳನ್ನು ಇವರು ನೀಡಿರುತ್ತಾರೆ.

ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಗಳವರಿಂದ, ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಲಲಿತಕಲೆ ವಿಭಾಗದಿಂದ, ವಿಜಯನಗರ ಸಾಂಸ್ಕೃತಿಕ ಸಂಸ್ಥೆ ಮತ್ತು ರೋಟರಿ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್, ಕನ್ನಡ ಸಾಹಿತ್ಯ ಪರಿಷತ್ ಮತ್ತು ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯದಿಂದ ಸನ್ಮಾನಕ್ಕೆ ಭಾಜನರಾಗಿರುತ್ತಾರೆ.

ಇಷ್ಟೆ ಅಲ್ಲದೆ ಇಂಡಿಯಾ ಬುಕ್ ಹೌಸ್, ರಾಷ್ಟ್ರೋತ್ಥಾನ ಪರಿಷತ್ ಹೊರತಂದ ಭಾರತ ಭಾರತಿ ಪುಸ್ತಕಸಂಪದ, ಮಲ್ಲಿಗೆ, ಜನಪ್ರಗತಿ, ಸುಧಾ ಕಾದಂಬರಿಗಳು, ಸ್ಮರಣ ಸಂಚಿಕೆಗಳು ಇತ್ಯಾದಿ ಪುಸ್ತಕಗಳಲ್ಲಿ ಇವರ ವರ್ಣ ಹಾಗೂ ರೇಖಾಚಿತ್ರಗಳು ಪ್ರಕಟಗೊಂಡಿರುತ್ತವೆ. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವ ಸಂದರ್ಭದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಇವರ 6 ಕಲಾಕೃತಿಗಳನ್ನು ಮುಖ್ಯಮಂತ್ರಿಗಳಾದ ದಿ:: ಡಿ. ದೇವರಾಜ ಅರಸ್ ಅವರು ಅನಾವರಣಗೊಳಿಸಿರುತ್ತಾರೆ.

ರಾಷ್ಟ್ರಪತಿ ಭವನ, ಸುತ್ತೂರು ಮಠ, ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಸಂಗ್ರಹಾಲಯ, ಶಿಕ್ಷಣ ಸಂಸ್ಥೆಗಳು, ಕೆ.ಆರ್. ಆಸ್ಪತ್ರೆ, ಇಂಗ್ಲೆಂಡ್, ಆಸ್ಟ್ರೇಲಿಯಾ ಮುಂತಾದೆಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹವಾಗಿವೆ.

**ಶ್ರೀ ವಿಜಯನಾಥ್ ಶಣೈ, ಉಡುಪಿ**

1934ರ ಜೂನ್ 3 ರಂದು ಉಡುಪಿಯಲ್ಲಿ ಜನಿಸಿದ ವಿಜಯನಾಥ್ ಅವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿ ವೃತ್ತಿಯನ್ನಾರಂಭಿಸಿ ವ್ಯವಸ್ಥಾಪಕರಾಗಿ ನಿವೃತ್ತಿ ಹೊಂದಿರುತ್ತಾರೆ.

ಭಾರತೀಯ ಪಾರಂಪರಿಕ ಕಲೆಗಳಾದ ಸಂಗೀತ, ನೃತ್ಯ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಆಸಕ್ತಿ ಹೊಂದಿದ ಇವರು ಈ ಕ್ಷೇತ್ರಗಳಿಗೆ ಸುಮಾರು 32 ವರ್ಷಗಳ ಕಾಲ ತಮ್ಮ ಸೇವೆಯನ್ನು ಸಲ್ಲಿಸಿದರು. ಮೊದಲಿಗೆ 1961ರಲ್ಲಿ ಸಂಗೀತಕೋಸ್ಕರ ಸಂಗೀತ ಸಭಾ ಎಂಬ ಸಂಸ್ಥೆಯನ್ನು ಉಡುಪಿಯಲ್ಲಿ ಪ್ರಾರಂಭಿಸಿದರು. ಉಡುಪಿಯ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಹಲವು ಚರ್ಚಾಸ್ಪರ್ಧೆ, ಸಂವಾದಗಳನ್ನು ಆಯೋಜಿಸುವುದರೊಂದಿಗೆ ಕರ್ನಾಟಕ ಸಂಘದ ಅಂಗವಾಗಿ 'ರೈಟರ್ಸ್ ಕ್ಲಬ್'ಅನ್ನು 1969ರಲ್ಲಿ ಪ್ರಾರಂಭಿಸಿದರು.

ಯಕ್ಷಗಾನ ಕಲೆಯ ಪ್ರದರ್ಶನಗಳಿಗಾಗಿಯೇ ಮಣಿಪಾಲ್‌ನಲ್ಲಿ ಯಕ್ಷ ಮಂಡಲವನ್ನು ಪ್ರಾರಂಭಿಸಿದರು. ಪಾರಂಪರಿಕ ಹಳ್ಳಿಯನ್ನು ಉದ್ದೇಶದಲ್ಲಿಟ್ಟುಕೊಂಡು ಆರು ಎಕರೆ ಜಾಗದಲ್ಲಿ 'ಹಸ್ತ ಶಿಲ್ಪ ಟ್ರಸ್ಟ್' ಅನ್ನು ಪ್ರಾರಂಭಿಸಿದರು. ಈ ಜಾಗದಲ್ಲಿ ಚಿತ್ರಕಲಾಕೃತಿಗಳ ಪ್ರದರ್ಶನ, ಶಿಲ್ಪಕಲಾಕೃತಿಗಳ ಪ್ರದರ್ಶನಗಳು, ಅಪರೂಪದ ಪುಸ್ತಕಗಳು, ತಾಳೆಗರಿ ಮುಂತಾದವುಗಳನ್ನು ಸಂರಕ್ಷಿಸಿರುತ್ತಾರೆ. ಪಳಯುಳಿಕೆಗಳ ಸಂರಕ್ಷಣೆಯ ದೃಷ್ಟಿಯಿಂದ ಉಡುಪಿ ಜಿಲ್ಲೆಯಲ್ಲಿರುವ ಸುಮಾರು 400 ವರ್ಷಗಳ ಹಿಂದಿನ ಮಣ್ಣಿನ ಅರಮನೆಯನ್ನು ಅದರ ಮೂಲಸ್ಥಳದಲ್ಲಿಯೇ ಕರ್ನಾಟಕದ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ಸಹಾಯದಿಂದ ಸಂರಕ್ಷಿಸ ಲಾಗುತ್ತಿದೆ. ಅನೇಕ ಸಂಘ ಸಂಸ್ಥೆಗಳಿಂದ ಗೌರವಕ್ಕೆ ಪಾತ್ರರಾಗಿರುವ ವಿಶ್ವನಾಥ್ ಅವರಿಗೆ 2003ರಲ್ಲಿ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಯು ಲಭಿಸಿರುತ್ತದೆ.






## ಶ್ರೀ ಕಾಶಪ್ಪ ವೀರಪ್ಪ ಕುಂದಗೋಳ, ಬೆಟಗೇರಿ, ಗದಗ

1947ರ ಫೆಬ್ರವರಿ 1 ರಂದು ಗದಗದಲ್ಲಿ ಜನಿಸಿದ ಕಾಶಪ್ಪ ಅವರು ಬಿ.ಎಸ್ಸಿ, ಎ.ಎಂ. ಹಾಗೂ ಡಿಪ್ಲೊಮಾ ಪದವೀಧರರಾಗಿರುತಾರೆ. ನಿಸರ್ಗ, ನವ್ಯ ಕಲಾಕೃತಿಗಳು, ಭಾವಚಿತ್ರಗಳು, ಸ್ತಬ್ಧ ಚಿತ್ರಗಳ ರಚನೆಯಲ್ಲಿ ಪರಿಣಿತರಾದ ಇವರು ಬಿಜಾಪುರ, ಗದಗ, ಬೆಟಗೇರಿಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಏಕವ್ಯಕ್ತಿ ಪ್ರದರ್ಶನವನ್ನು, ಹುಬ್ಬಳ್ಳಿ, ಧಾರವಾಡ, ಬಾಗಲಕೋಟೆ, ಬಿಜಾಪೂರ, ಹೈದ್ರಾಬಾದ್. ಮುಂಬೈ, ಮೈಸೂರು, ಗೋವಾ, ಚೆನ್ನೈ, ನವದೆಹಲಿ ಮುಂತಾದೆಡೆಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಸಮೂಹ ಪ್ರದರ್ಶನಗಳಲ್ಲಿ ಭಾಗವಹಿಸಿರುತ್ತಾರೆ.

ಬೆಂಗಳೂರಿನ ಕಲಾಮೇಳ, ಅಖಿಲ ಭಾರತೀಯ ಕಲಾ ಪ್ರದರ್ಶನ, ಧಾರವಾಡ, ಅಖಿಲ ಭಾರತೀಯ ಕಲಾಪ್ರದರ್ಶನ, ಬಿಜಾಪುರ, ಚೆನ್ನೈನ ರಾಷ್ಟ್ರಮಟ್ಟದ ಕಲಾವಿದರ ಶಿಬಿರ, ಹಂಪಿಯ ಕಲಾಮೇಳ ಮುಂತಾದ ಶಿಬಿರಗಳಲ್ಲಿ ಭಾಗವಹಿಸುವುದಲ್ಲದೆ, ಜೆ.ಎನ್. ಕಲಾಶಾಲೆ, ಗದಗ, ಶ್ರೀ ಸಿದ್ಧೇಶ್ವರ ಕಲಾಮಂದಿರ ಬಿಜಾಪುರ, ಪೆವ್ವಿಕಲ್ ಏಜೆನ್ಸೀಯವರು ಗದಗದಲ್ಲಿ ಏರ್ಪಡಿಸಿದ ಕಲಾಶಿಬಿರ ಪ್ರಾತ್ಯಕ್ಷಿಕೆ ಮುಂತಾದೆಡೆ ಪ್ರಾತ್ಯಕ್ಷಿಕೆಗಳನ್ನು ನೀಡಿರುತ್ತಾರೆ.

ಶ್ರೀ ಹೊಳಲಮ್ಮ ದೇವಿ ಶತಕ, ಶ್ರೀ ಹುಚ್ಚೀಶ್ವರ ಶತಕ ಮುಂತಾದ ಪುಸ್ತಕಗಳಿಗೆ ಮುಖಪುಟಗಳನ್ನು ರಚಿಸಿರುತ್ತಾರೆ. ಗದಗ, ಬೆಟಗೇರಿ, ಚೆನ್ನೈ, ಬಿಜಾಪುರ, ಯು.ಎಸ್.ಎ., ಬೆಂಗಳೂರು, ಹೊಸಪೇಟೆ ಮುಂತಾದೆಡೆ ಇವರ ಕಲಾಕೃತಿಗಳು ಸಂಗ್ರಹವಾಗಿವೆ.

■






## ವಾರ್ಷಿಕ ಬಹುಮಾನ

**ಕ**ರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರತಿ ವರ್ಷದಂತೆ 2015-16ನೇ ಸಾಲಿನಲ್ಲಿ ಏರ್ಪಡಿಸಿದ್ದ 44ನೇ ಕಲಾ ಪ್ರದರ್ಶನ ಮತ್ತು ಸ್ಪರ್ಧೆಗೆ ಒಟ್ಟು 464 ಕಲಾವಿದರಿಂದ 905 ಕಲಾಕೃತಿಗಳ ಛಾಯಾಚಿತ್ರಗಳು ಬಂದಿದ್ದು, 106 ಕಲಾವಿದರ ಕಲಾಕೃತಿಗಳ ಛಾಯಚಿತ್ರಗಳು ಮೊದಲ ಹಂತದಲ್ಲಿ ಆಯ್ಕೆಯಾಗಿತ್ತು.

ಆ ಪೈಕಿ 91 ಮೂಲ ಕಲಾಕೃತಿಗಳು ಅಂತಿಮವಾಗಿ ಸ್ವೀಕೃತವಾಗಿ ಕಡೆಗೆ ಅತ್ಯುತ್ತಮವೆನಿಸಿದ 10 ಕಲಾಕೃತಿಗಳನ್ನು ವಾರ್ಷಿಕ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ.

### ಬಹುಮಾನ ವಿಜೇತರು






**ಶ್ರೀ ಮುನಿಕೃಷ್ಣ. ಆರ್**
**(ಮಾಲೂರು)**
ಪೇಯಿನ್-ಲಾಕ್ ಮಿಶ್ರ ಮಾಧ್ಯಮ.





**ಶ್ರೀಮತಿ ವಿಜಯಾ ಗೋಪಿನಾಥ್ (ಬೆಂಗಳೂರು)**
ಚಾಮುಂಡೇಶ್ವರಿ (ಸಾಂಪ್ರದಾಯಿಕ ಶೈಲಿ) ಜಲವರ್ಣ.

---



**ಶ್ರೀಮತಿ ಸಂಗಮ್ ವಿ. ದೊಡ್ಡಮನಿ (ಬೆಳಗಾವಿ)**
ಅನ್‌ಟೈಟಲ್ ಗ್ರಾಫಿಕ್.







**ಶ್ರೀ ಐಶ್ವರ್ಯನ್ ಕೆ.**
**(ಬೆಂಗಳೂರು)**
ಲಾಸ್ ಆಫ್
ಅಟ್ರಾಕ್ಷನ್
ಮಿಶ್ರಮಾಧ್ಯಮ.

---







**ಶ್ರೀ ಕೆ.ಎಸ್.**
**ಶ್ರೀನಿವಾಸ**
**(ಬೆಂಗಳೂರು)**
ಕೋಬಾಲ್ಟ್ ಬ್ಲೂ
ಛಾಯಚಿತ್ರ.





**ಶ್ರೀ ಸುನೀಲ್ ಲೋಹಾರ್**
**(ಕಲಬುರ್ಗಿ)**
ವಾಹಕ ಜಲವರ್ಣ





**ಶ್ರೀ ವಸಂತ**
**(ಬಂಟ್ವಾಳ ತಾಲ್ಲೂಕು)**
ಪ್ರೆಸೆನ್ಸ್ ಇನ್ ದಿ
ಡಾರ್ಕ್ ಅಕ್ರಲಿಕ್






**ಶ್ರೀ ಮಹೇಶ್ ಪಿ. ಹೊನುಲೆ (ಬೆಳಗಾವಿ)**
ಭವಾನಿ ಮಂಟಪ
(ಪ್ರಕೃತಿ ಚಿತ್ರ)
ಜಲವರ್ಣ.

---





**ಶ್ರೀ ವಿಶ್ವಕರ್ಮ ಆಚಾರ್ಯ (ಚಿಕ್ಕಮಗಳೂರು)**
ಭಾವಚಿತ್ರ
ಪೆನ್ಸಿಲ್ ಮತ್ತು ಪೇಪರ್.





**ಶ್ರೀ ಲಿಂಗರಾಜು**
**ಕಾಚಾಪುರ**
**(ಬಿಜಾಪುರ)**
ಟಾಕ್ಸಿ ಎಚ್ಚಿಂಗ್.

---


**ನಿರೀಕ್ಷಿಸಿ....**

Government of Karnataka
Department of Kannada & Culture, Bengaluru
Karnataka Lalithakala Academy, Bengaluru

ಕಲಾ ಸಂಕ್ರಾಂತಿ
KALA SANKRANTI
Karnataka Art Summit 2016

PRESENTS

AN UNIQUE FOUR DAY ART SUMMIT TO BE HELD IN MAY 2016, THAT BRINGS TOGETHER 100 SELECTED ARTISTS. A FIRST TIME OPPORTUNITY FOR ART CONNOISSEURS TO BUY AN ART WORK FOR ₹5000 ONLY

**100**
- Artists
- Stalls
- Paintings
- Art Lovers

-Gifts from Karnataka's renowned Artists



ಪ್ರಜಾವಾಣಿ
'ಜಾನಪದ ಪ್ರತಿಮೆ' ಶಿಬಿರದಲ್ಲಿ ಕಲಾವಿದರ ಕುಂಚದಲ್ಲಿ ಅರಳುತ್ತಿರುವ ಕಲಾಕೃತಿಗಳು
ಜಾನಪದ ಲೋಕಕ್ಕೆ ಚಿತ್ರಕಲೆಯ ಮೆರಗು
Many shades of talent
The HINDU
ಲಲಿತಕಲಾ
ಗೌರವ ಪ್ರಶಸ್ತಿ
ಕಸದಲ್ಲಿ ರಸ....
ಚಿತ್ರಕಲಾ ವಿದ್ಯಾರ್ಥಿಗಳಿಗೆ ತಾಳ್ಮೆ ಅಗತ್ಯ
13-12-2015
ಜನಮನದಲ್ಲಿ ನೆಲೆ
ವೃಕ್ಷ ಕಲಾವಿದನ ಆತ್ಮಾವಲೋಕನ ಅಗತ್ಯ
ಕುಂಚದಲ್ಲಿ ಅರಳಿದ ಪ್ರಕೃತಿ
ಪ್ರಜಾವಾಣಿ
ಕಲಾವಿದರ ವಿನಿಮಯ
ಕಲಾವಿದರ ಕುಂಚದಲ್ಲಿ
ಚಿತ್ರ ರಚನೆಯಲ್ಲಿ ನಿರತ ರಾಷ್ಟ್ರಮಟ್ಟದ ಕಲಾವಿದರು.


ಲಲಿತಕಲಾ ಅಕಾಡೆಮಿ ಪ್ರಶಸ್ತಿ
ಸ್ಥಳದಲ್ಲೇ ರೇಖಾಚಿತ್ರ ರಚಿಸಿಕೊಡುವ ಕಲಾವಿದರು
ಶೆಣೈ, ಆಚಾರ್, ಕುಂದಗೋಳಗೆ
ಲಲಿತಕಲಾ ಅಕಾಡೆಮಿ ಗೌರವ
ಕಲೆಯ ಅನಾವರಣ
ಚಿತ್ರಕಲಾ ವಿದ್ಯಾರ್ಥಿಗಳು ಸೂಕ್ಷ್ಮಗ್ರಹಿಗಳಾಗಬೇಕು
Art camp provides canvas for all ends of a palette
'ಅಕಾಡೆಮಿ'ಯ ಮಾಧ್ಯಮ ಚಿತ್ರಗಳು
ರಾಮನಗರದಲ್ಲಿ 'ಜಾನಪದ ಪ್ರತಿಮೆಗಳು' ಕಲಾ ಶಿಬಿರಕ್ಕೆ ಚಾಲನೆ
'ಸಮುದಾಯ ಕಟ್ಟುವಲ್ಲಿ ಕಲಾವಿದರ ಪಾತ್ರ ಮುಖ್ಯ'
ಗರುಡಾದ್ರಿ ಕಲೆಗೆ
ಕಲಾವಿದರ ಮೆರುಗು...

## ರೇಖಾ ಸಂಭ್ರಮ

ಶಿವಮೊಗ್ಗದ ಸಿರಿಗನ್ನಡ ಪುಸ್ತಕ ಮನೆಯು ತನ್ನ ದಶಮಾನೋತ್ಸವದ ಪ್ರಯುಕ್ತ ಮೂರು ದಿನಗಳ ಕಾಲ ಪುಸ್ತಕ ಜಾತ್ರೆ, ಕನ್ನಡ ನುಡಿ ಹಬ್ಬವನ್ನು ಅಕ್ಟೋಬರ್‌ನಲ್ಲಿ ಹಮ್ಮಿಕೊಂಡಿತ್ತು. ಈ ಸಂದರ್ಭದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ವತಿಯಿಂದ **'ರೇಖಾ ಸಂಭ್ರಮ'**ವೂ ಆಯೋಜಿತವಾಗಿತ್ತು.



**ಸಿರಿಗನ್ನಡ ಪುಸ್ತಕ ಜಾತ್ರೆ ಉದ್ಘಾಟನೆ ನೆರವೇರಿಸುತ್ತಿರುವ ಅಕಾಡೆಮಿ ಅಧ್ಯಕ್ಷರು**

ಶಿವಮೊಗ್ಗದ ಬಿ.ಎಚ್.ರಸ್ತೆಯಲ್ಲಿರುವ ಕರ್ನಾಟಕ ಸಂಘದಲ್ಲಿ ಅಕ್ಟೋಬರ್ 2ರಿಂದ ನಾಲ್ಕರವರೆಗೆ ನಡೆದ ಈ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಚಿತ್ರಕಲೆಯನ್ನು ಜನಸಾಮಾನ್ಯರಿಗೆ ಹತ್ತಿರವಾಗಿಸುವ ಉದ್ದೇಶದಿಂದ 'ಸಿರಿಗನ್ನಡ ಪುಸ್ತಕ ಮನೆ'ಯ ಸಹಯೋಗದಲ್ಲಿ ಮೊಟ್ಟಮೊದಲ ಬಾರಿಗೆ 'ರೇಖಾ ಸಂಭ್ರಮ' ವನ್ನು ಹಮ್ಮಿಕೊಂಡಿತ್ತು.

ನಾಡಿನ ಹೆಸರಾಂತ ಕಲಾವಿದರು ಜನಸಾಮಾನ್ಯರಿಗೆ ಅವರಿಷ್ಟವಾದ ಚಿತ್ರಕೃತಿಗಳನ್ನು ಸ್ಥಳದಲ್ಲೇ ರಚಿಸಿಕೊಡುವ ಅವಕಾಶವನ್ನು ಕಲ್ಪಿಸಿತ್ತು. ಸಾರ್ವಜನಿಕರು ಕೇವಲ 200 ರೂಪಾಯಿಗಳನ್ನು ಪಾವತಿಸಿ ರೇಖಾಚಿತ್ರಕ್ಕಾಗಿ ಸಿದ್ಧಪಡಿಸಿದ್ದ ವಿಶೇಷವಾದ ಕಾರ್ಡ್ ಖರೀದಿಸಿ ಕಲಾವಿದರ ಬಳಿ ತೆರಳಿ ರೇಖಾಚಿತ್ರ ರಚಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದು 'ರೇಖಾ ಸಂಭ್ರಮ'ದ ವಿಶೇಷ.





ಚಿತ್ರರಚನೆಯಲ್ಲಿ ತೊಡಗಿರುವ ಕಲಾವಿದರ ಸಮೂಹ

ಕಲಾವಿದರಿಗೆ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರಿಂದ ಹಿತನುಡಿ.

ಪ್ರಸಿದ್ಧ ಕಲಾವಿದರಾದ ಶ್ರೀ ಬಾಗೂರು ಮಾರ್ಕಂಡೇಯ, ಶ್ರೀ ಚಂದ್ರಕಾಂತ ಸರೊದ್, ಶ್ರೀ ಜಿ.ಕೆ.ಶಿವಣ್ಣ, ಶ್ರೀಮತಿ ಕಾತ್ಯಾಯಿನಿ, ಶ್ರೀ ಪ್ರತಾಪ್ ಬಹುರೂಪಿ, ಶ್ರೀ ಸಿದ್ದು ಮುರುಗೋಡ್, ಶ್ರೀ ಸುನೀಲ್ ಮಿಶ್ರ, ಶ್ರೀ ಪ್ರಭು ಅರಸೂರು ಮತ್ತು ಶ್ರೀ ಎಸ್.ವಿ.ಹೂಗಾರ್ ಅವರು 'ರೇಖಾಸಂಭ್ರಮ' ದಲ್ಲಿ ಭಾಗವಹಿಸಿ ಕಲಾಪ್ರೇಮಿಗಳ ನೆಚ್ಚಿನ ಚಿತ್ರಕೃತಿಗಳನ್ನು ರಚಿಸಿಕೊಟ್ಟು ಮನಗೆದ್ದರು.

## ಪಡಸಾಲೆ ತಿಂಗಳ ಚಿತ್ರ

ಕರ್ನಾಟಕ ಲಲಿತಕಲಾ ಅಕಾಡೆಮಿಯ ವಿಶಿಷ್ಟ ಕಾರ್ಯಕ್ರಮ **'ಪಡಸಾಲೆ ತಿಂಗಳ ಚಿತ್ರ'**. ಬಯಲು ಕಲಾಪ್ರದರ್ಶನಕ್ಕೆ ಯುವ ಕಲಾವಿದರನ್ನು ಪ್ರೋತ್ಸಾಹಿಸುವುದು ಮತ್ತು ಅವರ ಕಲಾಕೃತಿಗಳ ಚೊಚ್ಚಲ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವುದು ಈ ಯೋಜನೆಯ ಮುಖ್ಯ ಉದ್ದೇಶ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಬಲಭಾಗದಲ್ಲಿ 'ಪಡಸಾಲೆ' ಕಲಾಗ್ಯಾಲರಿ ಸ್ಥಾಪನೆಯಾಗಿದೆ. ಆ ಬಯಲಿನ ಪಡಸಾಲೆ ಗ್ಯಾಲರಿಯಲ್ಲಿ ಕಲಾವಿದರು ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುವುದಕ್ಕೆ ದಿನಕ್ಕೆ ಕೇವಲ ನೂರು ರೂಪಾಯಿ ಬಾಡಿಗೆ ನಿಗದಿಮಾಡಲಾಗಿದೆ. ಯುವಕಲಾವಿದರು ಅತ್ಯಲ್ಪ ಹಣದಲ್ಲಿ ತಮ್ಮ ಕಲಾಕೃತಿಗಳನ್ನು ಈ 'ಪಡಸಾಲೆ'ಯಲ್ಲಿ





**‘ಪಡಸಾಲೆ ತಿಂಗಳ ಚಿತ್ರ’ ದ ಕಲಾಕೃತಿಗಳ ವೀಕ್ಷಣೆಯಲ್ಲಿ ಅಕಾಡೆಮಿ ಅಧ್ಯಕ್ಷರು, ಕಲಾವಿದ್ಯಾರ್ಥಿಗಳು. ಕಲಾಪ್ರದರ್ಶನಕ್ಕೆ ಸಾಕ್ಷಿಯಾದ ಕಲಾಪ್ರೇಮಿಗಳ ದಂಡು.**

ಪ್ರದರ್ಶಿಸಬಹುದಾಗಿದೆ. ವಿಶೇಷವಾಗಿ ಕಲಾವಿದ್ಯಾರ್ಥಿಗಳ ಪ್ರಾಥಮಿಕ ಕಲಾಪ್ರದರ್ಶನಕ್ಕೆ ಸೂಕ್ತವಾದ ವೇದಿಕೆಯಾಗಿ ‘ಪಡಸಾಲೆ’ಯನ್ನು ಲಲಿತಕಲಾ ಅಕಾಡೆಮಿ ರೂಪಿಸಿದೆ.

‘ಪಡಸಾಲೆ ತಿಂಗಳ ಚಿತ್ರ’ ಸರಣಿಯ ಎರಡನೇ ಕಾರ್ಯಕ್ರಮ 2015ರ ಅಕ್ಟೋಬರ್ ಐದರಂದು ಜರುಗಿತು. ಕಲಾವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂ ಅವರು ‘ಪಡಸಾಲೆ ತಿಂಗಳ ಚಿತ್ರ’ ಕಲಾಪ್ರದರ್ಶನಕ್ಕೆ ಚಾಲನೆ ನೀಡಿದರು. ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ತುಮಕೂರಿನ ಯುವಕಲಾವಿದರಾದ ಕೆ.ಎನ್.ಚಂದನ್, ವಿ.ನಾಗೇಶ್, ಟಿ.ಆರ್.ಮಾಲಿನಿ ಮತ್ತು ಎಸ್.ಸತ್ಯ ಅವರ ಕಲಾಕೃತಿಗಳು ಬೆಳಗ್ಗೆ ಹನ್ನೊಂದರಿಂದ ಸಂಜೆ 6ರವರೆಗೆ ಪ್ರದರ್ಶಿತಗೊಂಡು ಕಲಾರಸಿಕರು ಮತ್ತು ಕಲಾಸಮುದಾಯದ ಗಮನಸೆಳೆದವು.

## ತಿಂಗಳ ಚಿತ್ರ


ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರತಿ ತಿಂಗಳು ನಡೆಸುವ ಯುವ ಕಲಾವಿದರ ಕೃತಿಗಳ ಪ್ರದರ್ಶನ **'ತಿಂಗಳ ಚಿತ್ರ'** ಅಕ್ಟೋಬರ್ 7ರಂದು ನೆರವೇರಿತು.

ಕರ್ನಾಟಕ ಗಮನ ಕಲಾಪರಿಷತ್ತಿನ ಅಧ್ಯಕ್ಷರು ಹಾಗೂ ಹೆಸರಾಂತ ಗಮಕ ಕಲಾವಿದರು, ಗಾಯಕರೂ ಆದ ಶ್ರೀ ಎಂ.ಆರ್.ಸತ್ಯನಾರಾಯಣ ಅವರು ಅಕಾಡೆಮಿಯ ವರ್ಣ ಕಲಾಗ್ಯಾಲರಿಯಲ್ಲಿ ಕಲಾಪ್ರದರ್ಶನಕ್ಕೆ ಚಾಲನೆ ನೀಡಿ ಕಲಾವಿದರನ್ನು ಉದ್ದೇಶಿಸಿ ಮಾತನಾಡಿದರು. ಅಕಾಡೆಮಿಯ ಅಧ್ಯಕ್ಷರಾದ ಎಂ.ಎಸ್.ಮೂರ್ತಿ ಮತ್ತು ಕಲಾಸಕ್ತರು ಉಪಸ್ಥಿತರಿದ್ದರು.

ಯುವಕಲಾವಿದರಾದ ಮೌನೇಶ್ವರ ರುದ್ರಪ್ಪ ಪತ್ತಾರ, ಪಿ. ಅಚ್ಯುತಾನಂದ, ಶಿವಣ್ಣ ಗೊಳಸಂಗಿ ಮತ್ತು ಶಾಂತಯ್ಯ ಮಲ್ಲಯ್ಯ ಪರಡೀಮಠ ಅವರ ಕಲಾಕೃತಿಗಳು ಐದು ದಿನಗಳ ಕಾಲ ಪ್ರದರ್ಶಿತಗೊಂಡು ಕಲಾವಲಯವನ್ನು ಆಕರ್ಷಿಸಿದವು.



**'ತಿಂಗಳ ಚಿತ್ರ' ಕಲಾಕೃತಿಗಳನ್ನು ಗಣ್ಯರು ವೀಕ್ಷಿಸುತಿರುವುದು.**



**ಕಲಾಪ್ರದರ್ಶನದಲ್ಲಿ ಅನಾವರಣಕೊಂಡ ಚಿತ್ರಕಲಾಕೃತಿಗಳು**

## ಸುರಪುರ ಚಿತ್ರಕಲಾ ಶಿಬಿರ

ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಕಲ್ಬುರ್ಗಿಯ ದಿ ಐಡಿಯಲ್ ಫೈನ್ ಆರ್ಟ್ ಸೊಸೈಟಿಯ ಸಂಯುಕ್ತಾಶ್ರಯದಲ್ಲಿ ಸುರಪುರದ ಗರುಡಾದ್ರಿ ಕಲಾಮಂದಿರದಲ್ಲಿ 2015ರ ಅಕ್ಟೋಬರ್ 13ರಿಂದ 16ರವರೆಗೆ ನಾಲ್ಕು ದಿನಗಳ ಕಾಲ **ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ**ವನ್ನು ಏರ್ಪಡಿಸಲಾಗಿತ್ತು.

ಕಲಾಶಿಬಿರಕ್ಕೆ ಚಾಲನೆ ನೀಡಬೇಕಾಗಿದ್ದ ಮಾಜಿ ಸಚಿವರಾದ ಶ್ರೀ ರಾಜಾ ಮದನಗೋಪಾಲ ನಾಯಕ ಅವರ ಗೈರು ಹಾಜರಿಯಲ್ಲಿ ಕಲ್ಬುರ್ಗಿಯ ದಿ ಐಡಿಯಲ್ ಫೈನ್ ಆರ್ಟ್ ಸೊಸೈಟಿಯ ಕಾರ್ಯದರ್ಶಿಗಳಾದ ಹಿರಿಯ ಚಿತ್ರಕಲಾವಿದರಾದ ಡಾ.ವಿ.ಜಿ.ಅಂದಾನಿ ಅವರು ಶಿಬಿರ ಉದ್ಘಾಟಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಶಿಬಿರದ ರೂಪುರೇಷೆ ಮತ್ತು ಧ್ಯೇಯೋದ್ದೇಶಗಳನ್ನು ತಿಳಿಸಿಕೊಟ್ಟರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಮತ್ತು ಸ್ಥಳಿಯ ಕಲಾವಿದರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಸುಮಾರು 17–18ನೇ ಶತಮಾನ ಕಾಲಘಟ್ಟದ **“ಸುರಪುರ ಕಲೆ’** ಎಂದು ಹೆಸರಾದ ಆ ಸೂಕ್ಷ್ಮಕಲೆಯ ಕೌಶಲ್ಯವನ್ನು, ವಿಶೇಷವನ್ನು ಶಿಬಿರದಲ್ಲಿ ಭಾಗವಹಿಸಿದ್ದ ಕಲಾವಿದರು ಪರಸ್ಪರ ವಿನಿಮಯ ಮಾಡಿಕೊಂಡರು.



**ಸುರಪುರ ಚಿತ್ರಕಲಾಶಿಬಿರದ ಉದ್ಘಾಟನೆಗೆ ಸಾಕ್ಷಿಯಾದ ಗಣ್ಯರು**



**ಚಿತ್ರರಚಿಸುವ ಮೂಲಕ ಶಿಬಿರಕ್ಕೆ ಚಾಲನೆ.**


ನಾಲ್ಕು ದಿನಗಳ ಕಾಲ ಜರುಗಿದ ಕಲಾಶಿಬಿರದಲ್ಲಿ ಕಲಾವಿದರಾದ ಶ್ರೀ ಅಶೋಕ್ ನೆಲ್ಲಗಿ, ಕಲಬುರ್ಗಿ, ಶ್ರೀ ಜಗನ್ನಾಥ ಬೆಲ್ಲದ, ಬೆಂಗಳೂರು, ಶ್ರೀ ಐಯಾಜ ಪಟೇಲ, ವಿಜಯಪುರ, ಗುಲ್ಬರ್ಗದ ಶ್ರೀ ಮಹಂತೇಶ್ವರಿಕಾಂಟೆ, ಜಗದೀಶ್ ಮುತ್ತಣ್ಣ ಕಾಂಬ್ಳೆ, ಶ್ರೀ ರಾಜಣ್ಣ ಎನ್.ಹೆಚ್., ತುಮಕೂರು, ಶ್ರೀ ದುಂಡರಾಜ, ಬೆಂಗಳೂರು, ಶ್ರೀ ಬಾನುವಳ್ಳಿ ಪಿ. ನಾಗರಾಜ, ದಾವಣಗೆರೆ, ಶ್ರೀ ಚಲಮೇಶ್, ತುಮಕೂರು, ಶ್ರೀ ಎಸ್.ಹೆಚ್. ನಾಗರಾಜ್, ತುಮಕೂರು, ಮತ್ತು ಬೆಂಗಳೂರಿನ ಶ್ರೀ ಮುನಿಮೋಹನ್ ಅವರು ಪಾಲ್ಗೊಂಡು ತಲಾ ಎರಡೆರಡು ಕಲಾಕೃತಿಗಳನ್ನು ರಚಿಸಿಕೊಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ಸುರಪುರ ತಾಲ್ಲೂಕಿನ ಅಧ್ಯಕ್ಷರಾದ ಶ್ರೀ ಶಾಂತಪ್ಪ ಬೂದಿಹಾಳ್ ಅವರು ಸಮಾರೋಪ ನುಡಿಗಳನ್ನು ಆಡಿದರು. ಸುರಪುರದ ಶಾಸಕ ಶ್ರೀ ರಾಜಾವೆಂಕಟಪ್ಪ ನಾಯಕ ಅವರು ಅಕ್ಟೋಬರ್ 16ರಂದು ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಕಲಾವಿದರಾದ ಶ್ರೀ ಬಸವರಾಜ ಉಪ್ಪಿನ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕಲ್ಬುರ್ಗಿ ವಿಶ್ವವಿದ್ಯಾಲಯದ ಉಪನ್ಯಾಸಕರಾದ ಶ್ರೀ ಡಿ.ಕಾಶಿನಾಥ, ಅಕಾಡೆಮಿಯ ರಿಜಿಸ್ಟ್ರಾರ್ ಕೆ. ಸುಧೀಂದ್ರ ಮತ್ತಿತರರು ಉಪಸ್ಥಿತರಿದ್ದರು.

## ರಾಷ್ಟ್ರೀಯ ಚಿತ್ರಕಲಾ ಶಿಬಿರ

ಕರ್ನಾಟಕ ಲಲಿತಕಲಾ ಅಕಾಡೆಮಿ, ಉಡುಪಿಯ ಆರ್ಟಿಸ್ಟ್ ಫೋರಂ ಮತ್ತು ಮಣಿಪಾಲ್ ಸೆಂಟರ್ ಫಾರ್ ಫಿಲಾಸಫಿ ಅಂಡ್ ಹ್ಯೂಮ್ಯಾನಿಟಿ ಸಂಯುಕ್ತವಾಗಿ ಮಣಿಪಾಲದಲ್ಲಿ ನಾಲ್ಕು ದಿನಗಳ **ರಾಷ್ಟ್ರೀಯ ಚಿತ್ರಕಲಾ ಶಿಬಿರ**ವನ್ನು ಆಯೋಜಿಸಿತ್ತು.

2015ರ ಅಕ್ಟೋಬರ್ 25ರಿಂದ 28ರವರೆಗೆ ನಡೆದ ಈ ಚಿತ್ರಕಲಾ ಶಿಬಿರವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಪೀಟರ್ ಎ.ಲೂಯಿಸ್ ಅವರು ಉದ್ಘಾಟಿಸಿ ಕಲಾಕೃತಿಗಳ ರಚನೆಗೆ ವಿಧ್ಯುಕ್ತ



**ರಾಷ್ಟ್ರೀಯ ಚಿತ್ರಕಲಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅಕಾಡೆಮಿ ಅಧ್ಯಕ್ಷರ ಮಾತು**



**ಕಲಾಕೃತಿಗಳ ರಚನೆಯಲ್ಲಿ ಕಲಾವಿದರ ತನ್ಮಯತೆ**

ಚಾಲನೆ ನೀಡಿದರು. ಹಾಲಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಮತ್ತು ಕಲಾಸಮೂಹ ಉದ್ಘಾಟನಾ ಸಮಾರಂಭಕ್ಕೆ ಸಾಕ್ಷಿಯಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಲಾವಿದರು ಕಲಾಕೃತಿ ರಚಿಸಿ ಕೌಶಲ್ಯ ತೋರಿಸುವುದರ ಜೊತೆಗೆ ತಾವು ಸಮಾಜಕ್ಕೆ ಏನು ಕೊಡುಗೆ ನೀಡಿದ್ದೇವೆ ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಹೇಳಿದರು.

ರಾಷ್ಟ್ರ ಮಟ್ಟದ ಹೆಸರಾಂತ ಚಿತ್ರಕಲಾವಿದರಾದ ಶ್ರೀ ಯು. ಭಾಸ್ಕರ್‌ರಾವ್ (ಬೆಂಗಳೂರು), ಶ್ರೀ ಕೆ.ಚಂದ್ರನಾಥ್ ಆಚಾರ್ಯ (ಪುತ್ತೂರು), ಶ್ರೀ ಬಿ.ದೇವರಾಜ್ (ಬೆಂಗಳೂರು), ಶ್ರೀಮತಿ ಗಾಯಿತ್ರಿ ದೇಸಾಯಿ (ಧಾರವಾಡ), ಶ್ರೀಮತಿ ಮಾಧವಿ ಆಡ್ವಿರೇಕರ್ (ಮುಂಬೈ), ಶ್ರೀ ಜಗತಾಪ್ ಸುರೇಂದ್ರ (ಮುಂಬೈ), ಶ್ರೀ ಜಗದೀಶ್ ಕಾಂಬ್ಳೆ (ಕಲಬುರ್ಗಿ), ಶ್ರೀ ಮಾನಸ ಜನ (ಭುವನೇಶ್ವರ್), ಶ್ರೀ ಯುವನ್ ಭೋದಿಸತ್ವರ್ (ಚೆನ್ನೈ), ಶ್ರೀ ಮಧು (ಏರ್ನಾಕುಲಂ-ಕೇರಳ), ಸುಭಾಸ್ ಬಹು (ಹೈದ್ರಾಬಾದ್), ಶ್ರೀ ಅಲೋಕ್ ಶರ್ಮ (ಇಂಧೋರ್), ಶ್ರೀ ಕೆ.ಎಸ್.ಅಪ್ಪಾಜಯ್ಯ (ಬೆಂಗಳೂರು), ಶ್ರೀ ಪಿ.ಎಸ್.ಪುಂಚಿತ್ತಾಯ (ಕಾಸರಗೋಡು) ಮತ್ತು ಪುದುಚೇರಿಯ ಶ್ರೀ ಕೀರ್ತಿ ಚಂದಕ್ ಅವರು ನಾಲ್ಕು ದಿನಗಳ ಈ ಶಿಬಿರದಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದರು. ಉಡುಪಿ ಆರ್ಟಿಸ್ಟ್ ಫೋರಂನ ಅಧ್ಯಕ್ಷರಾದ

ಶ್ರೀ ಪುರುಷೋತ್ತಮ ಅಡ್ವೆ ಅವರು ಶಿಬಿರದ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು.

ಅಕ್ಟೋಬರ್ 28ರಂದು ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮಣಿಪಾಲ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ.ನಾರಾಯಣ ಸಭಾಹಿತ್ ಅವರು ಸಮಾರೋಪ ನುಡಿಗಳನ್ನು ಆಡಿದರು. ಕಲಾವಿದರಾದ ಶ್ರೀ ರಮೇಶ್‌ರಾವ್, ಮಣಿಪಾಲದ ಎಂ.ಸಿ.ಪಿ.ಎಚ್‌ನ ನಿರ್ದೇಶಕರಾದ ಶ್ರೀ ನಿಖಿಲ್ ಗೋವಿಂದ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

## ‘ಜಾನಪದ ಪ್ರತಿಮೆಗಳು’ ಕಲಾಶಿಬಿರ


ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಕರ್ನಾಟಕ ಜಾನಪದ ಪರಿಷತ್ತು ಜಂಟಿಯಾಗಿ ರಾಮನಗರದಲ್ಲಿ **‘ಜಾನಪದ ಪ್ರತಿಮೆಗಳು’** ಕಲಾ ಶಿಬಿರವನ್ನು ಹಮ್ಮಿಕೊಂಡಿತ್ತು.

2015ರ ಡಿಸೆಂಬರ್ 8ರಿಂದ 10ರವರೆಗೆ ಮೂರು ದಿನಗಳ ಕಾಲ ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ನಡೆದ ‘ಜಾನಪದ ಪ್ರತಿಮೆಗಳು’ ಕಲಾ ಶಿಬಿರವನ್ನು ಕರ್ನಾಟಕ ಜಾನಪದ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ. ಎಚ್.ಆರ್.ರಾಜೇಗೌಡ ಅವರು ಚಿತ್ರ ಬರೆಯುವ ಮೂಲಕ ಉದ್ಘಾಟಿಸಿದರು. ಜಾನಪದ ಲೋಕದ ಆಡಳಿತಾಧಿಕಾರಿ ಡಾ. ಕುರುವ ಬಸವರಾಜ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ರಿಜಿಸ್ಟ್ರಾರ್ ಕೆ. ಸುಧೀಂದ್ರ ಮತ್ತಿತರರು ಉಪಸ್ಥಿತರಿದ್ದರು.

ಶಿಬಿರದಲ್ಲಿ ಕಲಾವಿದರಾದ ಬೆಂಗಳೂರಿನ ಕೆಂಪಣ್ಣ, ಮಂಡ್ಯದ ಜಿ.ಎಸ್.ಸುಜೀತ್‌ಕುಮಾರ್, ಬೀದರ್‌ನ ಸತೀಶ್ ವಲ್ಲೇಪೂರ, ಬಾದಾಮಿಯ ವೀರಣ್ಣ ಕರಡಿ, ಬೆಂಗಳೂರಿನ ಪ್ರಕಾಶ್ ಕುರ್ಚಗಿ, ಬೆಳಗಾವಿಯ ಜಯಂತ್ ಹುಬ್ಬಳ್ಳಿ, ಬೆಂಗಳೂರಿನ ಅನಿಮೇಶ್ ನಾಗನೂರು,




**‘ಜಾನಪದ ಪ್ರತಿಮೆಗಳು’ ಶಿಬಿರ ಉದ್ಘಾಟಿಸಿ ಮಾತನಾಡುತ್ತಿರುವ ಡಾ|| ರಾಜೇಗೌಡ ಹೊಸಹಳ್ಳಿ, ಅಕಾಡೆಮಿ ಅಧ್ಯಕ್ಷರಾದ ಡಾ.ಎಂ.ಎಸ್. ಮೂರ್ತಿ ಮತ್ತು ರಿಜಿಸ್ಟ್ರಾರ್ ಕೆ. ಸುಧೀಂದ್ರ ಅವರ ಉಪಸ್ಥಿತಿ**



**ಚಿತ್ರ ರಚನೆ ಮೂಲಕ ಶಿಬಿರಕ್ಕೆ ಡಾ. ರಾಜೇಗೌಡ ಹೊಸಹಳ್ಳಿ ಅವರಿಂದ ಚಾಲನೆ, ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ಜಾನಪದ ಲೋಕದ ಆಡಳಿತಾಧಿಕಾರಿ ಕುರುವ ಬಸವರಾಜ್ ಮತ್ತಿತರರ ಸಮ್ಮುಖ.**

ವಿಜಯ ನಾಗವೇಕರ್, ರಾಯಚೂರಿನ ಅನೀಸ್ ಫಾತಿಮಾ, ಬೆಂಗಳೂರಿನ ಡಾ. ಸೌಮ್ಯ ಮಂಜುನಾಥ್ ಚವ್ಹಾಣ್, ಮೈಸೂರಿನ ಟಿ.ಎಸ್. ಜಯದೇವಣ್ಣ, ಕಲಬುರ್ಗಿಯ ಚಂದ್ರಶೇಖರ್. ಜಿ.ಪಾಟೀಲ, ಬಾಗಲಕೋಟೆಯ ಡಿ.ಕೆ.ರಂಗನಾಥ್, ವಿಜಯಪುರದ ಸುಧೀರ್ ಪಡನಿಸ್ ಮತ್ತು ರಾಘವೇಂದ್ರ ಎಚ್.ಪಾಟೀಲ್ ಅವರು ಭಾಗವಹಿಸಿ ತಲಾ ಎರಡೆರಡು ಕಲಾಕೃತಿಗಳನ್ನು ರಚಿಸಿಕೊಟ್ಟರು.

ಡಿಸೆಂಬರ್ 10ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿಗಳಾದ ಶ್ರೀಮತಿ ಇಂದಿರಾ ಬಾಲಕೃಷ್ಣ ಅವರು ಸಮಾರೋಪ ಭಾಷಣ ಮಾಡಿದರು. ಪರಿಷತ್ತಿನ ಪದಾಧಿಕಾರಿಗಳು ಮತ್ತು ಅಕಾಡೆಮಿಯ ರಿಜಿಸ್ಟ್ರಾರ್ ಕೆ. ಸುಧೀಂದ್ರ ಮತ್ತಿತರರು ಉಪಸ್ಥಿತರಿದ್ದರು. ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

### ಭಾವ ನಮನ

ಇತ್ತೀಚೆಗೆ ನಿಧನರಾದ ರಾಜ್ಯದ ಹಿರಿಯ ಚಿತ್ರಕಲಾವಿದ ಕೆ.ಎಸ್.ರಾಮಚಂದ್ರನ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಅಕಾಡೆಮಿಯ ವರ್ಣ ಕಲಾಗ್ಯಾಲರಿಯಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರನ್ನೊಳಗೊಂಡು ಗಣ್ಯರು ರಾಮಚಂದ್ರನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.



**ಕೆ.ಎನ್. ರಾಮಚಂದ್ರನ್ ಅವರ ಭಾವಚಿತ್ರಕ್ಕೆ ಅಕಾಡೆಮಿ ಅಧ್ಯಕ್ಷರಿಂದ ಪುಷ್ಪನಮನ**

ಆನಂತರ ಮಾತನಾಡಿದ ಅಕಾಡೆಮಿ ಅಧ್ಯಕ್ಷರು ಕಲಾವಲಯಕ್ಕೆ ರಾಮಚಂದ್ರನ್ ಅವರ ಕೊಡುಗೆಯನ್ನು ನೆನೆದರು.

ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಚಿ.ಸು.ಕೃಷ್ಣಶೆಟ್ಟಿ, ಹಿರಿಯ ಕಲಾವಿದರಾದ ಶ್ರೀ ಎಂ.ಬಿ.ಪಾಟೀಲ್, ಶ್ರೀ ಯು.ಭಾಸ್ಕರ್‌ರಾವ್ ಮತ್ತಿತರರು ಅಗಲಿದ ಕಲಾವಿದನ ವ್ಯಕ್ತಿತ್ವ, ಬದುಕು ಮತ್ತು ಸಾಧನೆಯನ್ನು ಸ್ಮರಿಸಿ ಭಾವನಮನ ಸಲ್ಲಿಸಿದರು.

## ಕಾರ್ಯಾಗಾರ

ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನಲ್ಲಿ ಡಿಸೆಂಬರ್ 13ರಂದು 8ನೇ ರಾಷ್ಟ್ರಮಟ್ಟದ ದೃಶ್ಯಕಲಾ ಕಾಲೇಜುಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಕಾರ್ಯಾಗಾರವನ್ನು ಉದ್ಘಾಟಿಸಿ ಕಲಾವಿದರು ಮತ್ತು ಕಲಾಸಮೂಹದ ನಡೆ ಹೇಗಿರಬೇಕೆಂದು ತಿಳಿಸಿಕೊಟ್ಟರು. ಗುಜರಾತ್ ಅನ್ವಯಿಕ ಕಲೆ ವಿಭಾಗದ ಪ್ರೊ ಕಿರಣ್ ಷಾ ಅವರು ಚಿತ್ರಕಲಾ ವಿದ್ಯಾರ್ಥಿಗಳಿಗೆ ಸಂವಹನ ಕಲೆ ಮತ್ತು ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸುವ ತಾಳ್ಮೆ ಅತ್ಯವಶ್ಯಕ. ಶ್ರದ್ಧೆ ಮತ್ತು ಬದ್ಧತೆಯಿಂದ ಅಧ್ಯಯನ ಮಾಡಿದರೆ ಯಶಸ್ಸು ಲಭಿಸಿಯೇ ತೀರುತ್ತದೆ ಎಂದರು.

ಏಳು ದಿನಗಳ ಕಾಲ ನಡೆದ ಕಾರ್ಯಾಗಾರದಲ್ಲಿ ವಿವಿಧ ರಾಜ್ಯಗಳ ದೃಶ್ಯಕಲಾ ಕಾಲೇಜುಗಳ 50 ವಿದ್ಯಾರ್ಥಿಗಳು ಪಾಲ್ಗೊಂಡು ಕಲಾ ಅಧ್ಯಯನ, ಕಲಾಪ್ರದರ್ಶನ, ಕಲಾಕೃತಿ ರಚನೆ, ಸಂವಾದ, ಸಮಕಾಲೀನ ಕಲಾವಿದರ ಪರಿಚಯವನ್ನು ಮಾಡಿಕೊಂಡರು.

■

# ಕನಸುಗಳು ನೂರಾರು ಸಾಕಾರಗೊಂಡವು ಹಲವಾರು

**ಕ**ರ್ನಾಟಕ ಲಲಿತಕಲಾ ಅಕಾಡೆಮಿ ಕನ್ನಡದ ಕಲಾವಲಯವನ್ನು ಸಂಪನ್ನಗೊಳಿಸಲು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು ಸುವರ್ಣ ಸಂಭ್ರಮವನ್ನು ನೂರ್ಮಡಿಗೊಳಿಸುವಂತಹ ಯೋಜನೆಗಳನ್ನು ಸಾಕಾರಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ. ಡಾ. ಎಂ.ಎಸ್.ಮೂರ್ತಿ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ 2014ರ ಫೆಬ್ರವರಿ 26ರಿಂದ ಜೂನ್ 19 ಮತ್ತು ಆನಂತರ ಆಗಸ್ಟ್ 13ರಿಂದ 2015ರ ಡಿಸೆಂಬರ್ ಅಂತ್ಯದವರೆಗೂ ಅಕಾಡೆಮಿ ಕೈಗೊಂಡ ಕಾರ್ಯಕ್ರಮಗಳು, ನಡೆಸಿದ ಕಲಾಶಿಬಿರಗಳು, ಪ್ರಾಯೋಜನೆ ಮಾಡಿದ ಕಾರ್ಯಕ್ರಮಗಳು ಹಲವಾರು. ಆ ಎಲ್ಲಾ ಚಟುವಟಿಕೆಗಳನ್ನು ಒಟ್ಟಂದದಲ್ಲಿ ದಾಖಲಿಸುವ, ಕಲಾ ಸಮುದಾಯಕ್ಕೆ ಮುಟ್ಟಿಸುವ ಪ್ರಯತ್ನವೇ ಈ ವಿವರ.

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 1 | ದಿ.ಕೆ.ಎಚ್. ಪಾಟೀಲ್‌ರವರ 87ನೇ ಜನ್ಮದಿನಾಚರಣೆ ಅಂಗವಾಗಿ ಕಲಾಶಿಬಿರ ಗದಗ | ದಿನಾಂಕ: 12/3/2014 ರಿಂದ 16/03/2014 | ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿ, ಹುಲಿಕೋಟೆ, ಗದಗ |
| 2 | ತೊಗಲುಗೊಂಬೆ ಶಿಬಿರಕ್ಕೆ ಸಹಕಾರ: ಕರ್ನಾಟಕ ಲಲಿತಕಲಾ ಅಕಾಡೆಮಿ | ದಿನಾಂಕ: 24/5/2014 | ಚಿತ್ರಕಲಾ ಪರಿಷತ್ ಬೆಂಗಳೂರು |
| 3 | ವಸಂತ ಸಂಭ್ರಮ, ಬೆಂಗಳೂರು | ದಿನಾಂಕ: 24/08/2014 | ರವೀಂದ್ರ ಕಲಾಕ್ಷೇತ್ರದ ಶಿಲ್ಪವನ, ಬೆಂಗಳೂರು |

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 4 | ಪಿ. ಕಾಳಿಂಗರಾವ್ ಶತಮಾನೋತ್ಸವ ಹೊಂಬಾಳೆ ಪ್ರತಿಭಾರಂಗ- ಸಹಕಾರ : ಕರ್ನಾಟಕ ಲಲಿತಕಲಾ ಅಕಾಡೆಮಿ ಭಾವ ಚಿತ್ರ ಕಲಾಶಿಬಿರ | ದಿನಾಂಕ: 22/8/2014 ರಿಂದ 24/08/2014 | ಶಿಲ್ಪವನ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು |
| 5 | ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ (ರಿ) ಮೈಸೂರು (ಶಿಬಿರ ಮತ್ತು ಪ್ರದರ್ಶನ) | ದಿನಾಂಕ: 12/9/2014ರಿಂದ 14/9/2014 | ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಅವರಣ ಮೈಸೂರು |
| 6 | ತಿಂಗಳ ಚಿತ್ರ | 2014 ನವೆಂಬರ್ 11 ರಿಂದ 17 | ವರ್ಣ ಗ್ಯಾಲರಿ, ಬೆಂಗಳೂರು |
| 7 | ಪ್ರಶಸ್ತಿ ಪ್ರದಾನ ಸಮಾರಂಭ 2014 ಹಾಗೂ ವಾರ್ಷಿಕ ಕಲಾಪ್ರದರ್ಶನ | ದಿನಾಂಕ: 25/11/2014 | ರವೀಂದ್ರ ಕಲಾಕ್ಷೇತ್ರ ಬೆಂಗಳೂರು |
| 8 | ಪದ್ಮಶ್ರೀ ಪುರಸ್ಕೃತರಾದ ಪ್ರೋ.ಕೆ.ಜಿ. ಸುಬ್ರಮಣ್ಯನ್ ಸಂವಾದ ಕಾರ್ಯಕ್ರಮ | ದಿನಾಂಕ: 01-12-2014 | ವರ್ಣ ಗ್ಯಾಲರಿ, ಬೆಂಗಳೂರು |
| 9 | ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ, ಸಹಕಾರ - ಕರ್ನಾಟಕ ಲಲಿತಕಲಾ ಅಕಾಡೆಮಿ ಕಲಾಶಿಬಿರ | ದಿನಾಂಕ: 08/12/2014 ರಿಂದ 11/12/2014 | ಶ್ರೀ ಗುರು ತಿಪ್ಪೇರುದ್ರ ಸ್ವಾಮಿ, ದೇವಸ್ಥಾನ, ಸಮುದಾಯ ಭವನ ಒಳಮಠ, ನಾಯಕನ ಹಟ್ಟಿ, ಚಿತ್ರದುರ್ಗ |
| 10 | ಸುವರ್ಣ ಕಲಾ ಸಂಭ್ರಮ 28,29,31ರ ವರೆಗೆ | ಡಿಸೆಂಬರ್ ವೃತ್ತ, ಬೆಳಗಾವಿ | ಕನ್ನಡ ಭವನ, ಚನ್ನಮ್ಮ |
| 11 | ಸಂಕ್ರಾಂತಿ ಕಲಾ ಶಿಬಿರ ಸಹಕಾರ : ಕರ್ನಾಟಕ ಲಲಿತಕಲಾ ಅಕಾಡೆಮಿ | ದಿನಾಂಕ: 09-01-2015ರಿಂದ 12-01-2015 | ಕಲಾಗ್ರಾಮ, ಬೆಂಗಳೂರು |
| 12 | ತಿಂಗಳ ಚಿತ್ರ | ದಿನಾಂಕ: 31-01-2015ರಿಂದ 04-02-2015 | ವರ್ಣ ಗ್ಯಾಲರಿ, ಬೆಂಗಳೂರು |
| 13 | ಅಖಿಲ ಭಾರತ ಮಹಿಳಾ ಕಲಾವಿದರ ಶಿಬಿರ, ಗುಲ್ಬರ್ಗಾ | ದಿನಾಂಕ: 21-02-2015ರಿಂದ 25-02-2015 | ಗುಲ್ಬರ್ಗಾ ವಿಶ್ವ ವಿದ್ಯಾಲಯ |

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 14 | ಕಲಾಶಿಬಿರ, ಕೃಷಿ ಮಹಾ ವಿದ್ಯಾಲಯ ಭೀಮರಾಯ ಗುಡಿ,ಶಹಾಪುರ – ಸಹಕಾರ | ದಿನಾಂಕ:23-02-2015 ರಿಂದ 27-02-2015ರ ವರೆಗೆ | ಸ್ಪಂದನ ಚಾರಿಟಬಲ್ ಟ್ರಸ್ಟ್ (ರಿ) ಶಹಾಪುರ |
| 15 | ರಾಜ್ಯಮಟ್ಟದ 3 ದಿನಗಳ ಚಿತ್ರ-ರಂಗೋತ್ಸವ ಚಿತ್ರಕಲಾ ಶಿಬಿರ, ಪ್ರಾಯೋಗಶೀಲರ ಟ್ರಸ್ಟ್ (ರಿ), ಟಿ. ದಾಸರಹಳ್ಳಿ, ಸಹಕಾರ – ಕರ್ನಾಟಕ ಲಲಿತಕಲಾ ಅಕಾಡೆಮಿ | ದಿನಾಂಕ: 23/02/2015 ರಂದು 25/02/2015 | ಗುಬ್ಬಿವೀರಣ್ಣ ರಂಗಮಂದಿರ ತುಮಕೂರು |
| 16 | ತಿಂಗಳ ಚಿತ್ರ | ದಿನಾಂಕ: 28-02-2015 ರಿಂದ 4-03-2015 | ವರ್ಣ ಗ್ಯಾಲರಿ, ಬೆಂಗಳೂರು |
| 17 | ಕಲಾವಿದ ಶ್ರೀ ರಘೋತ್ತಮ ಪುಟ್ಟಿ ಅವರ ಜನ್ಮ ಶತಮಾನೋತ್ಸವ ಅಂಗವಾಗಿ ಕಲಾಶಿಬಿರ ಮತ್ತು ಪ್ರದರ್ಶನ | ದಿ. 3-4 ಮಾರ್ಚ್-2015 | ಮೈಸೂರು |
| 18 | ನಾಟಕ-ಚಿತ್ರ ನಾಟಕಾಧರಿತ ಚಿತ್ರಕಲಾ ಶಿಬಿರ | 2015ರ ಮಾರ್ಚ್ 11 ರಿಂದ 15 | ಕಲಾಗ್ರಾಮ, ಬೆಂಗಳೂರು |
| 19 | "ವಸಂತ ಕಲಾಶಿಬಿರ" ವಿಶೇಷ ಘಟಕ, ಗಿರಿಜನ ಉಪಯೋಜನೆಯ ಮತ್ತು ಸಾಮಾನ್ಯ ವರ್ಗದ ಕಲಾಶಿಬಿರ | ದಿನಾಂಕ: 15-03-2015 ರಿಂದ 19-03-2015 | ಫ್ಲಥ್ವಿ ಮಲ್ಲಣ್ಣ, ಸಾಕ್ಷಿ ರಿಟ್ರಿಯೇಟ್, ಓಶೋಧ್ಯಾನ ಕೇಂದ್ರ, ತುಮಕೂರು |
| 20 | ಶಿಲ್ಪಕಲಾ ಶಿಬಿರ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿ,ಸಹಕಾರ. ಬೆಂಗಳೂರು. | ದಿನಾಂಕ: 09ರಿಂದ 23 ಮಾರ್ಚ್ 2015 | ಕಲಾಗ್ರಾಮ, ಬೆಂಗಳೂರು. |
| 21 | "ಯುಗಾದಿ ಕಲಾಶಿಬಿರ" ವಿಶೇಷ ಘಟಕ, ಗಿರಿಜನ ಉಪಯೋಜನೆಯ ಮತ್ತು ಸಾಮಾನ್ಯ ವರ್ಗದ ಕಲಾಶಿಬಿರ | ದಿನಾಂಕ: 28-03-2015 ರಿಂದ 31-03-2015 | ಜೋಷಿಗಲ್ಲಿ ಗಾರ್ಡನ್, ಇಳಕಲ್ಲ, ಬಾಗಲಕೋಟೆ |
| 22 | ತಿಂಗಳ ಚಿತ್ರ | ದಿನಾಂಕ: 06-04-2015 ರಿಂದ 10-04-2015 | ವರ್ಣಗ್ಯಾಲರಿ, ಬೆಂಗಳೂರು |

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 23 | 'ಕನಕ ಚಿಂತನ' ಕಲಾಶಿಬಿರ, ರಾಷ್ಟ್ರೀಯ ಸಂತಕವಿ ಕನಕ ದಾಸ ಅಧ್ಯಯನ ಮತ್ತು ಸಂಸೋಧನಾ ಕೇಂದ್ರ ಅವರ ಸಹಯೋಗದಲ್ಲಿ | ದಿನಾಂಕ: 07/4/2015 ರಂದು | ರವೀಂದ್ರ ಕಲಾಕ್ಷೇತ್ರದ ಶಿಲ್ಪವನ, ಬೆಂಗಳೂರು |
| 24 | ತಿಂಗಳ ಚಿತ್ರ | ದಿನಾಂಕ: 25-04-2015 ರಿಂದ 29-04-2015 | ವರ್ಣಗ್ಯಾಲರಿ, ಬೆಂಗಳೂರು |
| 25 | ಕನ್ನಡ-ಕಲೆ ಶಿಬಿರ ಕ.ಸಾ.ಪ. ಶತಮಾನೋತ್ಸವ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು – ಸಹಕಾರ | ದಿನಾಂಕ:01-05-2015 ರಿಂದ 02-05-2015ರ ವರೆಗೆ | ಶಿಲ್ಪವನ,ರವೀಂದ್ರ ಕಲಾಕ್ಷೇತ್ರಆವರಣ, ಬೆಂಗಳೂರು |
| 26 | ವೈಶಾಖ ಕಲಾ ಶಿಬಿರ-2015 | ದಿನಾಂಕ: 04-05-2015 ರಿಂದ 07-05-2015 | ಕೋಟೆ ಹಳೆ ವಿಧಾನ ಸಭಾಂಗಣ, ಮಡಿಕೇರಿ |
| 27 | ತಿಂಗಳ ಚಿತ್ರ | ದಿನಾಂಕ: 23-05-2015 ರಿಂದ 27-05-2015 | ವರ್ಣಗ್ಯಾಲರಿ, ಬೆಂಗಳೂರು |
| 28 | ಕಲಾಭಿನಂದನೆ | ದಿನಾಂಕ: 24-05-2015 | ವರ್ಣಗ್ಯಾಲರಿ, ಬೆಂಗಳೂರು |
| 29 | ಮುಂಗಾರು ಕಲಾ ಶಿಬಿರ 1-2015, ವಿಶೇಷ ಘಟಕ ಹಾಗೂ ಗಿರಿಜನುಪಯೋಜನೆ ಮತ್ತು ಸಾಮಾನ್ಯ ವರ್ಗದ ಕಲಾಶಿಬಿರ | ದಿನಾಂಕ: 28-05-2015 ರಿಂದ 31-05-2015 | ಮದ್ದಿನಖಣಿ, ಬಿ.ಎಲ್.ಡಿ.ಇ.ಆಸ್ಪತ್ರೆ ರಸ್ತೆ, ವಿಜಯಪುರ |
| 30 | ರಂಗ ಮುಂಗಾರು ಕಲಾ ಶಿಬಿರ, ಪದ ಸಾಂಸ್ಕೃತಿಕ ಸಂಸ್ಥೆ ಬೆಂಗಳೂರು- ಸಹಕಾರ | ದಿನಾಂಕ: 3-6-2015 | ಕಲಾಗ್ರಾಮ, ಬೆಂಗಳೂರು |
| 31 | ಮುಂಗಾರು ಕಲಾ ಶಿಬಿರ 2- 2015, ವಿಶೇಷ ಘಟಕ ಹಾಗೂ ಗಿರಿಜನುಪಯೋಜನೆ ಮತ್ತು ಸಾಮಾನ್ಯ ವರ್ಗದ ಕಲಾಶಿಬಿರ | ದಿನಾಂಕ: 11-06-2015 ರಿಂದ 14-06-2015 | ಗದಗಜಿಲ್ಲಾ ವಾಣಿ ಜ್ಯೋದ್ಯಮ, ಗದಗ |

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 32 | ಮುಂಗಾರು ಕಲಾ ಶಿಬಿರ 3-2015, ವಿಶೇಷ ಘಟಕ ಹಾಗೂ ಗಿರಿಜನುಪಯೋಜನೆ ಮತ್ತು ಸಾಮಾನ್ಯ ವರ್ಗದ ಕಲಾಶಿಬಿರ | ದಿನಾಂಕ: 13-06-2015 ರಿಂದ 16-06-2015 | ಕರ್ನಾಟಕಸಾಹಿತ್ಯ ಸಂಘ, ಬೀದರ್ |
| 33 | ತಿಂಗಳ ಚಿತ್ರ | ದಿನಾಂಕ: 22-06-2015 ರಿಂದ 26-06-2015 | ವರ್ಣಗ್ಯಾಲರಿ, ಬೆಂಗಳೂರು |
| 34 | ಮುಂಗಾರು ಕಲಾ ಶಿಬಿರ 2014-2015 | ದಿನಾಂಕ: 30-06-2015 ರಿಂದ 03-07-2015 | ಗಿರಿದರ್ಶಿನಿ ಮತ್ತು ಅಕಾಶ್ ಕಾಟೇಜ್, ಲೋಕೋಪಯೋಗಿ ಇಲಾಖೆ ಪ್ರವಾಸಿ ಮಂದಿರದ ಮುಂಭಾಗ, ಬಿ.ಆರ್. ಹಿಲ್ಸ್, ಚಾಮರಾಜನಗರ |
| 35 | 'ಪಡಸಾಲೆ' ತಿಂಗಳ ಚಿತ್ರ | ದಿನಾಂಕ: 27-6-2015 ರಿಂದ 01-07-2015 | ಪಡಸಾಲೆ ಆರ್ಟ್ ಗ್ಯಾಲರಿ ರವೀಂದ್ರ ಕಲಾಕ್ಷೇತ್ರ ಆವರಣ, ಬೆಂಗಳೂರು |
| 36 | 'ಸ್ಪರ್ಶ' ರಾಜ್ಯಮಟ್ಟದ ಚಿತ್ರಕಲಾ ಶಿಬಿರ | ದಿನಾಂಕ: 01-7-2015 ರಿಂದ 04-07-2015 | ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗು ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾ ನಿಲಯ, ಮನಸ ಗಂಗೋತ್ರಿ, ಮೈಸೂರು |
| 37 | "ಶಬ್ದ-ನಿಶ್ಶಬ್ದ" ಕಲಾ ಶಿಬಿರ | ದಿನಾಂಕ: 10-7-2015 ರಿಂದ 14-07-2015ರ ವರೆಗೆ | ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ಕುಪ್ಪಳ್ಳಿ |
| 38 | "ಸಂಗಮ ಸಂಭ್ರಮ" - 2015 ಚಿತ್ರಕಲಾ ಶಿಬಿರ | ದಿನಾಂಕ: 22-07-2015 ರಿಂದ 26-07-2015 | ಪಿಲಿಕುಳ ನಿಸರ್ಗ ಧಾಮ,ಮಂಗಳೂರು (ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಎಲ್ಲಾ ಅಕಾಡೆಮಿಗಳ, ಪ್ರಾಧಿಕಾರ, ಅಧ್ಯಯನ ಕೇಂದ್ರಗಳ ಸಹಭಾಗಿತ್ವದಲ್ಲಿ) |

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 39. | 2014ನೇ ಸಾಲಿನ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ, ನಾಡೋಜ ಡಾ. ವಿ.ಟಿ. ಕಾಳೆ ಅವರಿಗೆ | ದಿನಾಂಕ 14-09-2015 | ರವೀಂದ್ರಕಲಾಕ್ಷೇತ್ರ, ಬೆಂಗಳೂರು |
| 40. | ತಿಂಗಳ ಕಲಾವಿದರು ಶ್ರೀ ಯು. ಭಾಸ್ಕರ್ ರಾವ್ ಇವರೊಂದಿಗೆ | ದಿನಾಂಕ : 11-09-2015 | ವರ್ಣಗ್ಯಾಲರಿ, ಬೆಂಗಳೂರು |
| 41. | ಪ್ರೀತಿ ಪದಗಳ ಪಯಣ "ಸ್ಪರ್ಶ" ಕಲಾಶಿಬಿರ | ದಿನಾಂಕ: 13 -09-2015 ರಿಂದ 15-09-2015 ರ ವರೆಗೆ, | ಚಿಂತನ ರಂಗ ಅಧ್ಯಯನ ಕೇಂದ್ರ (ರಿ) ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, "ಸ್ಪರ್ಶ" ದಾಂಡೇಲಿ ಕಲಾಶಿಬಿರ |
| 42 | ಸಿರಿಗನ್ನಡ ಪುಸ್ತಕ ಮನೆ, ಶಿವಮೊಗ್ಗ | ದಿನಾಂಕ : 3-10-2015 ರಿಂದ 04-10-2015 ರ ವರೆಗೆ | "ರೇಖಾ ಸಂಭ್ರಮ" ಕನ್ನಡ ಸಂಘ,ಬಿ.ಹೆಚ್. ರಸ್ತೆ, ಶಿವಮೊಗ್ಗ |
| 43. | ಪಡಸಾಲೆ ತಿಂಗಳ ಚಿತ್ರ | ದಿನಾಂಕ: 5-10-2015 ರಿಂದ 09-10-2015 | ಪಡಸಾಲೆ ಆರ್ಟ್ ಗ್ಯಾಲರಿ ರವೀಂದ್ರ ಕಲಾಕೇತ್ರ, ಬೆಂಗಳೂರು |
| 44. | ತಿಂಗಳ ಚಿತ್ರ | ದಿನಾಂಕ:7-10-2015 ರಿಂದ 11-10-2015ರ ವರೆಗೆ | ವರ್ಣಗ್ಯಾಲರಿ ಬೆಂಗಳೂರು |
| 45. | ಸುರಪುರ ಚಿತ್ರಕಲಾ ಶಿಬಿರ | ದಿನಾಂಕ: 13-10-2015 ರಿಂದ 16-10-2015 | ದಿ. ಐಡಿಯಲ್ ಫೈನ್ ಆರ್ಟ್ ಸೊಸೈಟಿ, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಸುರುಪುರ ಕಲಾಶಿಬಿರ |
| 46. | ರಾಷ್ಟ್ರೀಯ ಚಿತ್ರಕಲಾ ಶಿಬಿರ ಮಣಿಪಾಲ | ದಿನಾಂಕ: 25-10-2015 ರಿಂದ 28-10-2015, | ಮಣಿಪಾಲ್ ಸೆಂಟರ್ ಫಾರ್ ಫಿಲಾಸಪಿ ಅಂಡ್ ಹ್ಯೂಮ್ಯಾನಿಟಿ, ಮಣಿಪಾಲ |
| 47 | ಅಂತರಜಾಲತಾಣ (ವೆಬ್‌ಸೈಟ್) ಲೋಕಾರ್ಪಣೆ ಹಾಗೂ ಕಲಾವಿದರ ಗುರುತಿನ ಚೀಟಿ ಪ್ರದಾನ | ದಿನಾಂಕ: 9/11/2015, | ವರ್ಣಗ್ಯಾಲರಿ, ಬೆಂಗಳೂರು |

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 48 | ದೃಶ್ಯ ಕಲೆಯಲ್ಲಿ ರೇಖೆಗಳ ಮಹತ್ವ-ವಿಚಾರ ಸಂಕಿರಣ ಮತ್ತು ಸಂವಾದ | ನವೆಂಬರ್ - 30, ಡಿಸೆಂಬರ್ 1 -2015 | ಕಾಫೀ ಮೌಂಟೇನ್ ರೆಸಾರ್ಟ್ ಕತ್ತಲೆ ಕಾಡು, ಮಡಿಕೇರಿ |
| 49 | ಜಾನಪದ ಪ್ರತಿಮೆಗಳು ಕಲಾಶಿಬಿರ | ದಿನಾಂಕ: 7-12-2015 ರಿಂದ 10-12-2015ರ ವರೆಗೆ ಕಲಾಶಿಬಿರ | ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಲೋಕ,ರಾಮನಗರ |

**ಒಂದು ವರ್ಷದ ಅವಧಿಯಲ್ಲಿ ಅಕಾಡೆಮಿಯ ಕಾರ್ಯಕ್ರಮಗಳ ವಿವರ**

| | | |
|---|---|---|
| 1 | ಅಕಾಡೆಮಿಯ ಒಟ್ಟು ಕಾರ್ಯಕ್ರಮಗಳು | 37 |
| 2 | ಒಟ್ಟು ಕಲಾಶಿಬಿರಗಳು | 26 |
| 3 | ಪ್ರದರ್ಶನಗಳು | 10 |
| 4 | ಶತಮಾನೋತ್ಸವ ಕಾರ್ಯಕ್ರಮ | 1 |
| 5 | ರಸಗ್ರಹಣ ಕಮ್ಮಟಗಳು ಶಾಲಾ, ಕಾಲೇಜು ಹಾಗೂ ಇತರೆ | 12 |
| 6 | ವಿದ್ಯಾರ್ಥಿ ವೇತನ ಒಟ್ಟು [ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದವರಿಗೆ] 14 + 99 +112 =225 | 225 |
| 7 | ಏಕ ಮತ್ತು ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ [ಒಟ್ಟು ಕಲಾವಿದರಿಗೆ] | 32 |
| 8 | 43ನೇ ವಾರ್ಷಿಕ ಕಲಾ ಬಹುಮಾನ | 10 |
| 9 | ಅಕಾಡೆಮಿಯ ಪ್ರತಿಷ್ಠಿತ ಗೌರವ ಪ್ರಶಸ್ತಿ | 6 |

**26 ಕಲಾಶಿಬಿರಗಳಲ್ಲಿ ಅವಕಾಶ ಪಡೆದ ಕಲಾವಿದರು**

| | | |
|---|---|---|
| 1 | ಕಲಾಶಿಬಿರದಲ್ಲಿ ಭಾಗವಹಿಸಿದ ಒಟ್ಟು ಕಲಾವಿದರು | 422 |
| 2 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾವಿದರು | 113 |
| 3 | ಸಾಮಾನ್ಯ ವರ್ಗದ ಕಲಾವಿದರು | 309 |
| 4 | ಪ್ರದರ್ಶನದಲ್ಲಿ ಭಾಗವಹಿಸಿದ ಕಲಾವಿದರು | 48 |
| 5 | ಶಿಬಿರದಲ್ಲಿ ಭಾಗವಹಿಸಿದ ಮಹಿಳಾ ಕಲಾವಿದರು | 64 |
| **ಪ್ರಪ್ರಥಮ ಬಾರಿಗೆ ಅಕಾಡೆಮಿಯ ಕಲಾಶಿಬಿರದಲ್ಲಿ ಭಾಗವಹಿಸಿದ ಕಲಾವಿದರು ಮತ್ತು ಕನಿಷ್ಠ 5 ವರ್ಷದ ಅವಧಿಯಲ್ಲಿ ಅವಕಾಶ ಸಿಗದೆ ಭಾಗವಹಿಸದೆ ಇದ್ದ ಕಲಾವಿದರಿಗೆ ಅವಕಾಶ ನೀಡಲಾಗಿದೆ.** | | |

**ಸುವರ್ಣ ಸಂಭ್ರಮದ ವಿಶೇಷ ಯೋಜನೆಗಳು ಹಾಗೂ ಅಕಾಡೆಮಿಯ ಯೋಜನೆಗಳು**

- ಗಡಿನಾಡು ಭಾಗದಲ್ಲಿ ಸುವರ್ಣ ಸಂಭ್ರಮದ ಮೊದಲ ಕಾರ್ಯಕ್ರಮವನ್ನು (2014ರ ಡಿಸೆಂಬರ್ ತಿಂಗಳಲ್ಲಿ) ಬೆಳಗಾವಿಯಲ್ಲಿ ನಡೆಸಲಾಗಿದೆ.
- ಸುವರ್ಣ ಸಂಭ್ರಮದ ವ್ಯಾಪ್ತಿ ಕರ್ನಾಟಕದ 30 ಜಿಲ್ಲೆಗಳಲ್ಲಿ ಒಳಗೊಂಡಂತೆ ಮತ್ತು ಎಲ್ಲಾ ಕಲಾಶಾಲೆ/ಕಾಲೇಜು ಹಾಗೂ ಸಂಸ್ಥೆಗಳನ್ನು ಪ್ರತಿನಿಧಿಸುವ ಕಲಾವಿದರು, ಕಲಾಸಕ್ತರು ಮತ್ತು ಕಲಾಪೋಷಕರ ಬಹುದೊಡ್ಡ ಸಮುದಾಯವನ್ನು ತಲುಪುವುದು. ಅಲ್ಲದೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಶಿಬಿರಗಳು, ಕಲಾ ಪ್ರದರ್ಶನಗಳು, ವಿಚಾರಸಂಕಿರಣಗಳು, ಸಂವಾದ, ಕಲಾಪ್ರಾತ್ಯಕ್ಷಿಕೆಗಳ ವ್ಯವಸ್ಥೆ, ಇತ್ಯಾದಿ,
- 'ಸುವರ್ಣ ಕಲಾ ಸಂಭ್ರಮ: ರಾಜ್ಯದ ಕಲಾ ಬೆಳವಣಿಗೆಗೆ ಪೂರಕವಾಗಿ ಕರ್ನಾಟಕ ಕಲಾ ಪರಂಪರೆಯು ಬೆಳೆದು ಬರುತ್ತಿರುವ ಹಾದಿ ಇಡಿ ಚಟುವಟಿಕೆಗಳು ಸಾಮೂಹಿಕ ಪ್ರದರ್ಶನಗಳು,
- ಸುವರ್ಣ ಸಂಭ್ರಮದಡಿಯಲ್ಲಿ 50 ಹಿರಿಯ ಕಲಾವಿದರ ಕುರಿತು ವಿಶೇಷ ಗ್ರಂಥ ಪ್ರಕಟಣೆ
- ಸಂತೆ ಜಾತ್ರೆ ಕಲಾ ಯಾತ್ರೆ ಯೋಜನೆಯಡಿ ರೇಖಾ ಮಾಧ್ಯಮದ ಪುನಶ್ಚೇತನ,
- ತಿಂಗಳ ಚಿತ್ರ ಯೋಜನೆಯಡಿ 4 ಯುವ ಕಲಾವಿದರ ಕಲಾಕೃತಿಗಳನ್ನು ವರ್ಣ ಗ್ಯಾಲರಿಯಲ್ಲಿ ಪ್ರದರ್ಶಿಸಲಾಗುವುದು.
- 2014-2015ರಲ್ಲಿ ಪರಿಶಿಷ್ಟ ಜಾತಿ -100 ಮತ್ತು ಪರಿಶಿಷ್ಟ ಪಂಗಡ - 15, ಬಿ.ಎಫ್ಎ, ಬಿವಿಎ ವಿದ್ಯಾರ್ಥಿಗಳಿಗೆ ತಲಾ ರೂ. 10,000/- ಗಳಂತೆ

  ಸಾಮಾನ್ಯ ವರ್ಗದ 120 ಬಿ.ಎಫ್.ಎ. ಬಿವಿಎ ವಿದ್ಯಾರ್ಥಿಗಳಿಗೆ ತಲಾ ರೂ. 4,000/-ಗಳಂತೆ


  ಎಂ.ಎಫ್. ಎ. ಎಂ.ವಿ.ಎ. ವಿದ್ಯಾರ್ಥಿಗಳಿಗೆ ತಲಾ ರೂ. 6,000/- ಗಳಂತೆ ವಿದ್ಯಾರ್ಥಿ ವೇತನ
- ಏಕ ಮತ್ತು ಸಮೂಹ ಕಲಾಪ್ರದರ್ಶನಕ್ಕೆ ಧನಸಹಾಯ ಯೋಜನೆ
- ಏಕವ್ಯಕ್ತಿ ಕಲಾಪ್ರದರ್ಶನಕ್ಕೆ ರಾಜ್ಯದಲ್ಲಿ 10 ಕಲಾವಿದರಿಗೆ ರೂ. 10,000/-ಗಳಂತೆ
- ಏಕವ್ಯಕ್ತಿ ಕಲಾಪ್ರದರ್ಶನಕ್ಕೆ ಹೊರರಾಜ್ಯದಲ್ಲಿ 10 ಕಲಾವಿದರಿಗೆ ತಲಾ ರೂ. 15,000/- ಗಳಂತೆ

- ಸಮೂಹ ಕಲಾಪ್ರದರ್ಶನಕ್ಕೆ ರಾಜ್ಯದಲ್ಲಿ 7 ಕಲಾವಿದರಿಗೆ ತಲಾ ರೂ. 15,000/– ಗಳಂತೆ
- ಸಮೂಹ ಕಲಾಪ್ರದರ್ಶನಕ್ಕೆ ಹೊರರಾಜ್ಯದಲ್ಲಿ 5 ಕಲಾವಿದರಿಗೆ ತಲಾ ರೂ. 20,000/– ಗಳಂತೆ
- 2014–15ನೇ ಸಾಲಿನಲ್ಲಿ ನಾಡಿನ 10 ಜನ ಹಿರಿಯ ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ
- ಮೂರು ಜನ ಹಿರಿ ಕಲಾವಿದರುಗಳಿಗೆ ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿ (ತಲಾ ರೂ. 50,000/–ಗಳಂತೆ)
- ಹತ್ತು ಜನ ಕಲಾವಿದರಿಗೆ ಅಕಾಡೆಮಿಯ ವಾರ್ಷಿಕ ಕಲಾಬಹುಮಾನ (ತಲಾ ರೂ. 25,000/–ಗಳಂತೆ)
- ಅಕಾಡೆಮಿಯ ಸಂಚಾರಿ ವಾಹನದ ಮೂಲಕ ಕರ್ನಾಟಕದ 30 ಜಿಲ್ಲೆಗಳಲ್ಲಿ ಚಿತ್ರಕಲಾಕೃತಿಗಳ ಪ್ರದರ್ಶನ ವ್ಯವಸ್ಥೆ.
- ಕಲಾ ಸಂಚಲನ ಹಾಗೂ ವರ್ಣ ಸಂಚಲನದ ಕಾರ್ಯಕ್ರಮಗಳ ವ್ಯವಸ್ಥೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಕಲಾಶಿಬಿರಗಳು – 7. ತುಮಕೂರು, ಬಾಗಲಕೋಟೆ, ವಿಜಯಪುರ, ಗದಗ, ಬೀದರ್, ಚಾಮರಾಜನಗರ ಹಾಗೂ ಮೈಸೂರು ಇನ್ನಿತರ ಸ್ಥಳಗಳಲ್ಲಿ

■

---

**ಅಪರೂಪದ ಆತಿಥ್ಯ**



**ಕೋಲ್ಕತ್ತಾದಲ್ಲಿ ನಡೆದ 'ಮಿಟ್ಟಿ ಉತ್ಸವ್'ದ ಉದ್ಘಾಟನೆ ಸಂದರ್ಭದಲ್ಲಿ ಭಾಗವಹಿಸಿದ್ದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ ಅವರೊಟ್ಟಿಗೆ ಕಲಾವಿದೆ ಶ್ರೀಮತಿ ಸಪನ್, ಹಿರಿಯ ಕಲಾವಿದರಾದ ಶ್ರೀ ಪ್ರೊದೀಪ್ ಘೋಷ್, ಶ್ರೀ ಸಪನ್, ಮತ್ತೊರ್ವ ಹಿರಿಯ ಕಲಾವಿದರಾದ ಶ್ರೀ ಶುವಪ್ರಸನ್ನ ಮತ್ತಿತರರು.**